ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ . ಪ್ರಶ್ನೆ ಸಂಖ್ಯೆ	:	994
ಸದಸ್ಯರ ಹೆಸರು	:	ಶ್ರೀ ದಿನಕರ್ ಕೇಶವ್ ಶೆಟ್ಟಿ (ಕುಮಟ)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸುವ ಸಚಿವರು	:	ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕ್ರಸ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಒಂದು ಪಂಚಾಯತ್‌ಗೆ ಒಂದು ಸರ್ಕಾರಿ ಶಾಲೆ ತೆರೆಯುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;	ಹೌದು.
ಆ)	ಶಾಲೆ ತೆರೆಯುವುದರ ಸಾಧಕ-ಬಾಧಕಗಳ ಕುರಿತು ಅಧ್ಯಯನ ನಡೆಸಲಾಗಿದೆಯೇ;	ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯಗಳ ಅನುಸಾರ ಪ್ರಾಯೋಗಿಕವಾಗಿ ರಾಜ್ಯದಲ್ಲಿ ಒಂದು ಪಂಚಾಯತ್‌ಗೆ ಒಂದು ವಾರ್ಡ್/ಪಂಚಾಯ್ತಿ ಪಬ್ಲಿಕ್ ಶಾಲೆ ತೆರೆದು, ಅಧ್ಯಯನ ನಡೆಸಲಾಗುವುದು.
ಇ)	ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	2021-22ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಾಯೋಗಿಕವಾಗಿ ರಾಜ್ಯದಲ್ಲಿ ಒಂದು ಪಂಚಾಯತ್‌ಗೆ ಒಂದು ವಾರ್ಡ್/ಪಂಚಾಯ್ತಿ ಪಬ್ಲಿಕ್ ಶಾಲೆಗಳನ್ನು ಆಯ್ದ 25 ಗ್ರಾಮ ಪಂಚಾಯಿತಿ ಮತ್ತು ನಗರ ಪ್ರದೇಶದ ಆಯ್ದ 25 ವಾರ್ಡ್‌ಗಳಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. 2021-22ನೇ ಸಾಲಿನ ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆ ಮೇರೆಗೆ ಕ್ರಮವಹಿಸಲಾಗುವುದು.

ಇಪಿ 36 ಯೋಸಕ 2020

(ಎಸ್.ಸುರೇಶ್ ಕುಮಾರ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	1082
ಮಾನ್ಯ ಸದಸ್ಯರ ಹೆಸರು	ಶ್ರೀ ಗುತ್ತೇದಾರ್ ಸುಭಾಷ್ ರುಕ್ಮಯ್ಯ (ಆಳಂದ)
ಉತ್ತರಿಸುವ ಸಚಿವರು	ಮಾನ್ಯ ಉಪಮುಖ್ಯಮಂತ್ರಿಗಳು (ಉನ್ನತ ಶಿಕ್ಷಣ)
ಉತ್ತರಿಸಬೇಕಾದ ದಿನಾಂಕ	04.02.2021

	ಪ್ರಶ್ನೆ	ಉತ್ತರ
(ಅ)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮಾನಸಗಂಗೋತ್ರಿ, ಮೈಸೂರು ವತಿಯಿಂದ ನಡೆಸಲಾಗುತ್ತಿದ್ದ ಎಂ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಗಳನ್ನು 2015ನೇ ಸಾಲಿನಿಂದ ಸ್ಥಗಿತಗೊಳಿಸಲಾಗಿದೆಯೇ;	ಹೌದು.
(ಆ)	ಹಾಗಿದ್ದಲ್ಲಿ, ಪ್ರಥಮ ವರ್ಷದ ಎಂ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ದ್ವಿತೀಯ ವರ್ಷದ ಎಂ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದೇ ಅವರುಗಳಿಗೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
(ಇ)	ಬಂದಿದ್ದಲ್ಲಿ, ದ್ವಿತೀಯ ವರ್ಷದ ಎಂ.ಎಸ್.ಡಬ್ಲ್ಯೂ ಪದವಿ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತಹ ಯಾವ ಕ್ರಮಗಳನ್ನು ಸರ್ಕಾರ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಯುಜಿಸಿಯ ನಿಯಮಗಳನ್ನು ಉಲ್ಲಂಘಿಸಿ ಶೈಕ್ಷಣಿಕ ಚಟುವಟಿಕೆ ನಡೆಸುತ್ತಿದ್ದ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯ ಧನಸಹಾಯ ಆಯೋಗವು (UGC) ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯಕ್ಕೆ ಶೈಕ್ಷಣಿಕ ಚಟುವಟಿಕೆ ನಡೆಸಲು ನೀಡಿದ್ದ 2013–14 & 2014–15ನೇ ಸಾಲುಗಳನ್ನು ಒಳಗೊಂಡು ಮಾನ್ಯತೆಯನ್ನು ರದ್ದು ಮಾಡಿತ್ತು. 2018ನೇ ಸಾಲಿನಲ್ಲಿ ಯುಜಿಸಿಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೆಲವು ಕೋರ್ಸ್‌ಗಳಿಗಷ್ಟೆ ಮಾನ್ಯತೆ ನೀಡಿದ್ದು, ಎಂ.ಎಸ್.ಡಬ್ಲ್ಯೂ ಕೋರ್ಸ್ ನಡೆಸಲು ಮಾನ್ಯತೆ ನೀಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ, ಎಂ.ಎಸ್.ಡಬ್ಲ್ಯೂ ಕೋರ್ಸ್ ಒಳಗೊಂಡಂತೆ ಯುಜಿಸಿಯು ಮಾನ್ಯತೆ ನೀಡದ ಯಾವುದೇ ಕೋರ್ಸಿಗೆ

		ವಿಶ್ವವಿದ್ಯಾನಿಲಯವು ಪರೀಕ್ಷೆ ನಡೆಸಲು ಅವಕಾಶವಿಲ್ಲ. 2015ನೇ ಸಾಲಿನಲ್ಲಿ 2013-14ನೇ ಸಾಲಿನಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯತೆಯನ್ನು ರದ್ದುಗೊಳಿಸಿದ್ದನ್ನು ಹಿಂಪಡೆದು ಪೂರ್ವಾನ್ವಯವಾಗಿ ಮಾನ್ಯತೆ ನೀಡುವಂತೆ ವಿಶ್ವವಿದ್ಯಾನಿಲಯ & ರಾಜ್ಯ ಸರ್ಕಾರವು ಯುಜಿಸಿ ಹಾಗೂ ಕೇಂದ್ರ ಸರ್ಕಾರವನ್ನು ಕೋರಿರುತ್ತದೆ.

ಸಂಖ್ಯೆ: ಇಡಿ 03 ಯುಓವಿ 2021

(ಡಾ: ಅಶ್ವಥ್ ನಾರಾಯಣ ಸಿ.ಎನ್.)
ಉಪ ಮುಖ್ಯಮಂತ್ರಿಗಳು
(ಉನ್ನತ ಶಿಕ್ಷಣ, ಐಟಿ ಬಿಟಿ, ವಿಜ್ಞಾನ ಮತ್ತು
ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ)

3

ಕರ್ನಾಟಕ ವಿಧಾನ ಸಭೆ

ಚುಕ್ಕೆಗುರುತಿನ ಪ್ರಶ್ನೆ ಸಂಖ್ಯೆ : 953
ಮಾನ್ಯ ಸದಸ್ಯರ ಹೆಸರು : ಶ್ರೀ ನಾಗೇಶ್ ಬಿ.ಸಿ (ತಿಪಟೂರು)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ.ಸಂ	ಪ್ರಶ್ನೆ	ಉತ್ತರ
ಅ	ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳನ್ನು ಎನ್ ಜಿ ಓ ಗಳಿಗೆ ನೀಡಲಾಗಿದೆ (ಜಿಲ್ಲಾವಾರು ಮತ್ತು ತಾಲ್ಲೂಕು ವಾರು ವಿವರ ನೀಡುವುದು);	ಆರೋಗ್ಯ ಬಂಧು -2016ರ ಪರಿಷ್ಕೃತ ಯೋಜನೆಯಡಿಯಲ್ಲಿ ರಾಜ್ಯದಲ್ಲಿ 49 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಎನ್.ಜಿ.ಓ ಗಳಿಗೆ ದತ್ತು ನಿರ್ವಹಣೆಗೆ ನೀಡಲಾಗಿದೆ. (ಜಿಲ್ಲಾವಾರು ಮತ್ತು ತಾಲ್ಲೂಕವಾರು ವಿವರ ಅನುಬಂಧದಲ್ಲಿ ನೀಡಲಾಗಿದೆ)
ಆ	ಈ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಎಲ್ಲಿಯವರೆಗೂ ವೇತನ ಪಾವತಿ ಮಾಡಲಾಗಿದೆ(ವಿವರ ನೀಡುವುದು);	42 ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೇತನಕ್ಕಾಗಿ ಒಟ್ಟು ರೂ.2602.67 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದರಂತೆ ಸದರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಏಪ್ರಿಲ್-2020ರವರೆಗೆ ವೇತನ ಪಾವತಿಸಲಾಗಿದೆ.
ಇ	ವೇತನ ಪಾವತಿಯಾಗದಿದ್ದಲ್ಲಿ ವೇತನ ಪಾವತಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು (ವಿವರ ನೀಡುವುದು);	ಮೇ-2020 ರಿಂದ ಡಿಸೆಂಬರ್ 2020ರವರೆಗೆ ಬಿಲ್ಲುಗಳನ್ನು ತಯಾರಿಸಿ ಮೇಲು ಸಹಿಗಾಗಿ ಜಿಲ್ಲಾ ಪಂಚಾಯತ್‌ಗೆ ಕಳುಸಿಕೊಡಲಾಗಿದ್ದು, ಜಿಲ್ಲಾ ಪಂಚಾಯತ್ ವಲಯದಿಂದ ವೇತನ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ.
ಈ	ಯಾವ ಕಾಲಮಿತಿಯೊಳಗೆ ವೇತನ ಪಾವತಿಸಲಾಗುವುದು (ವಿವರ ನೀಡುವುದು)?	

ಆಕುಕ 09 ಎಸ್‌ಎಂಎಂ 2021

(ಡಾ||ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಅನುಬಂಧ

ಪರಿಷ್ಕೃತ ಆರೋಗ್ಯ ಬಂದು ಯೋಜನೆಯ ಅಡಿಯಲ್ಲಿ ಸರ್ಕಾರೇತರ ಖಾಸಗಿ ಸಂಸ್ಥೆಗಳು ದತ್ತು ನಿರ್ವಹಣೆ ಮಾಡುತ್ತಿರುವ ಸಂಸ್ಥೆಗಳಿಗೆ ವಿವರ.

ಕ ಸಂ	ಜಿಲ್ಲೆ	ತಾಲ್ಲೂಕು	ಸಂಖ್ಯೆ	ಪ್ರಾಥಮಿಕ ಆರೋಗ್ಯ ಕೇಂದ್ರದ ಹೆಸರು	ಖಾಸಗಿ ದತ್ತು ನಿರ್ವಹಣೆ ಮಾಡುತ್ತಿರುವ ಸಂಸ್ಥೆ
	1	2		3	4
1	ಬೆಂಗಳೂರು (ನ)	ಬೆಂಗಳೂರು ನಗರ	1	ಪ್ರಾ ಆ ಕೇಂದ್ರ, ನೆಲಮಹೇಶ್ವರಿ	ಕರುಣಾ ಟ್ರಸ್ಟ್ ಬೆಂಗಳೂರು
2	ಬೆಂಗಳೂರು (ಗ್ರಾ)	ದೂಡ್ಡಬಳ್ಳಾಪುರ	2	ಪ್ರಾ ಆ ಕೇಂದ್ರ,ಕಮ್ಮಸಂದ್ರ	ಕರುಣಾ ಟ್ರಸ್ಟ್ ಬೆಂಗಳೂರು
3	ರಾಮನಗರ	ಮಾಗಡಿ	3	ಪ್ರಾ, ಆ ಕೇಂದ್ರ, ಸುಗ್ಗನಹಳ್ಳಿ	ಕರುಣಾ ಟ್ರಸ್ಟ್(ರಿ), ಬೆಂಗಳೂರು
4	ಚಿತ್ರದುರ್ಗ	ಹಿರಿಯೂರು	4	ಪ್ರಾ.ಆ.ಕೇಂದ್ರ ದಿಂಡಾವರ	ಕರುಣಾ ಟ್ರಸ್ಟ್(ರಿ), ಬೆಂಗಳೂರು
		ಚಿತ್ರದುರ್ಗ	5	ಪ್ರಾ.ಆ.ಕೇಂದ್ರ ಯಳಗೋಡು	ಪ್ರಾಂಶುಪಾಲರು. ವೈದ್ಯಕೀಯ ಮಹಾವಿದ್ಯಾಲಯ, ಚಿತ್ರದುರ್ಗ
5	ದಾವಣಗೆರೆ	ದಾವಣಗೆರೆ	6	ಪ್ರಾ ಆ ಕೇಂದ್ರ, ಲೋಕಿಕೆರೆ	ಎಸ್.ಎಸ್.ಐ.ಎಮ್.ಎಸ್& ಆರ್.ಸಿ.ದಾವಣಗೆರೆ
		ಜಗಳೂರು	7	ಪ್ರಾ ಆ ಕೇಂದ್ರ,ಮಲ್ಲಾಪುರ	ಕರುಣಾ ಟ್ರಸ್ಟ್(ರಿ), ಬೆಂಗಳೂರು.
6	ತುಮಕೂರು	ತಿಪಟೂರು	8	ಪ್ರಾ.ಆ.ಕೇಂದ್ರ ಹಾಲ್ಕುರಿಕೆ	ಕರುಣಾ ಟ್ರಸ್ಟ್ ಬೆಂಗಳೂರು
		ತಿಪಟೂರು	9	ಪ್ರಾ.ಆ.ಕೇಂದ್ರ ಅರಳಗುಪ್ಪೆ	ಕರುಣಾ ಟ್ರಸ್ಟ್ ಬೆಂಗಳೂರು
		ತಿಪಟೂರು	10	ಪ್ರಾ.ಆ.ಕೇಂದ್ರ ಬಳುವನೇರಲು	ಕರುಣಾ ಟ್ರಸ್ಟ್ ಬೆಂಗಳೂರು
7	ಬೆಳಗಾವಿ	ಬೆಳಗಾವಿ	11	ಪ್ರಾ ಆ ಕೇಂದ್ರ,ವಂಟಮುರಿ	ಜೆ ಎನ್ ಎಂ ಕಾಲೇಜು, ಬೆಳಗಾಂ
		ಬೆಳಗಾವಿ	12	ಪ್ರಾ ಆ ಕೇಂದ್ರಕಿಣಯೇ	ಜೆ ಎನ್ ಎಂ ಕಾಲೇಜು, ಬೆಳಗಾಂ
		ಬೆಳಗಾವಿ	13	ಪ್ರಾ ಆ ಕೇಂದ್ರಾ, ಅಶೋಕನಗರ	ಜೆ ಎನ್ ಎಂ ಕಾಲೇಜು, ಬೆಳಗಾಂ
		ಬೆಳಗಾವಿ	14	ಪ್ರಾ ಆ ಕೇಂದ್ರ, ರುಕ್ಮಿಣಿ ನಗರ	ಜೆ ಎನ್ ಎಂ ಕಾಲೇಜು, ಬೆಳಗಾಂ
		ಖಾನಾಪುರ	15	ಪ್ರಾ ಆ ಕೇಂದ್ರ, ಕಕ್ಕೇರಿ	ದಾನೇಶ್ವರಿ ಸಂಸ್ಥೆ, ಬೆಳಗಾವಿ
		ಖಾನಾಪುರ	16	ಪ್ರಾ ಆ ಕೇಂದ್ರ, ಅಶೋಕ ನಗರ	ದಾನೇಶ್ವರಿ ಸಂಸ್ಥೆ, ಬೆಳಗಾವಿ
		ಖಾನಾಪುರ	17	ಪ್ರಾ ಆಕೇಂದ್ರ, ರೋಂಡಾ	ದಾನೇಶ್ವರಿ ಸಂಸ್ಥೆ, ಬೆಳಗಾವಿ
		ಖಾನಾಪುರ	18	ಪ್ರಾ ಆ ಕೇಂದ್ರ, ಕಣಕುಂಬಿ	ಯುನೆಟೆಡ್ ವೆಲ್ವೇರ್ , ಬೆಳಗಾವಿ
8	ಬಿಜಾಪುರ	ಮುದ್ದೆಬಿಹಾಳ	19	ಅಡವಿ ಸೋಮನಾಳ	ನಾಗರಬೆಟ್ಟ ಫೌಂಡೇಷನ್, ಮುದ್ದೆಬಿಹಾಳ
		ಮುದ್ದೆಬಿಹಾಳ	20	ಪ್ರಾ ಆ ಕೇಂದ್ರ ಬಂಟನೂರು	ಕಸ್ತೂರಿ ಬಾಯಿ ಈರಪ್ಪ ಲೋಣಿ ಮೇಮೊರಿಯಲ್ ಟ್ರಸ್ಟ್, ಸಿಂದಗಿ
		ಇಂಡಿ	21	ಪ್ರಾ ಆ ಕೇಂದ್ರ. ಜಿಗಜಿಗಣಿ	ಕಸ್ತೂರಿ ಬಾಯಿ ಈರಪ್ಪ ಲೋಣಿ ಮೇಮೊರಿಯಲ್ ಟ್ರಸ್ಟ್, ಸಿಂದಗಿ
		ಸಿಂದಗಿ	22	ಪ್ರಾ ಆ ಕೇಂದ್ರ,ಅಸ್ಕಿ	ಗುಡ್ನಾಳ್ ಮೈನಾರಿಟಿ ರೂರಲ್ ಡೆವೆಲಪ್ಮೆಂಟ್, ಕಲ್ಕೇರಿ
		ಬಸವನ ಬಾಗೇವಾಡಿ	23	ಪ್ರಾ ಆ ಕೇಂದ್ರ, ಯಳವಾರ	ಗುಡ್ನಾಳ್ ಮ್ಐನಾರಿಟಿ ರೀರಲ್

					ಡೆವೆಲಪ್ಮೆಂಟ್, ಕಲ್ಕೇರಿ
		ವಿಜಯಪುರ	24	ಪ್ರಾ ಆ ಕೇಂದ್ರ, ಕನ್ನೂರು	ಕರುಣಾ ಟ್ರಸ್ಟ್
		ಮುದ್ದೇಬಿಹಾಳ	25	ಪ್ರಾ ಆ ಕೇಂದ್ರ, ಗರಸಂಗಗಿ	ಕಲಾಚೇತನಾ, ಯುವ ಸಂಸ್ಥೆ
9	ಧಾರವಾಡ	ಕಲಘಟಗಿ	26	ಪ್ರಾ ಆ ಕೇಂದ್ರ ಗಳಗಿ-ಹುಲಕೊಪ್ಪ	ಕರುಣಾ ಟ್ರಸ್ಟ್ ಬೆಂಗಳೂರು
10	ಗದಗ	ರೋಣ	27	ಪ್ರಾಥಮಿಕ ಆರೋಗ್ಯ ಕೇಂದ್ರ ಹಿರೇಹಾಳ	ಕರುಣಾ ಟ್ರಸ್ಟ್ ಬೆಂಗಳೂರು
		ಗದಗ	28	ಪ್ರಾಥಮಿಕ ಆರೋಗ್ಯ ಕೇಂದ್ರ ಹುಯಿಲಗೋಳ	ಕರುಣಾ ಟ್ರಸ್ಟ್ ಬೆಂಗಳೂರು
11	ಹಾವೇರಿ	ಹಾನಗಲ್	29	ಪ್ರಾ ಆ ಕೇಂದ್ರ, ಶೇಷಗಿರಿ	ಸುಕೃತಿ ಸ್ವಯಂ ಸೇವಾ ಸಂಸ್ಥೆ, ಕೊಪ್ಪಳ
12	ಉತ್ತರ ಕನ್ನಡ	ಜೋಯಿಡಾ	30	ಪ್ರಾ ಆ ಕೇಂದ್ರ, ಡಿಗ್ಗಿ	ಸ್ಕೊಡ್ ವೇಸ್ ಸಂಸ್ಥೆ,ಉತ್ತರ ಕನ್ನಡ
		ಜೋಯಿಡಾ	31	ಪ್ರಾ ಆ ಕೇಂದ್ರ, ಕ್ಯಾಸಲ್ ರಾಕ್	ಸ್ಕೊಡ್ ವೇಸ್ ಸಂಸ್ಥೆ,ಉತ್ತರ ಕನ್ನಡ
13	ಬಳ್ಳಾರಿ	ಕೂಡ್ಲಗಿ	32	ಪ್ರಾ ಆ ಕೇಂದ್ರ ಹುಡೇಂ	ಕರುಣಾ ಟ್ರಸ್ಟ್ ಬೆಂಗಳೂರು
		ಹೊಸಪೇಟೆ	33	ಪ್ರಾ ಆ ಕೇಂದ್ರ ಶ್ರೀರಾಮರಂಗಾಪುರ	ಕರುಣಾ ಟ್ರಸ್ಟ್ ಬೆಂಗಳೂರು
14	ಕೊಪ್ಪಳ	ಗಂಗಾವತಿ	34	ಪ್ರಾ ಆ ಕೇಂದ್ರ, ಆನೆಗುಂದಿ	ಕರುಣಾ ಟ್ರಸ್ಟ್(ರಿ) ಬೆಂಗಳೂರು
15	ಚಾಮರಾಜ ನಗರ	ಚಾಮರಾಜನಗರ ನಗರ (ತಾ)	35	ಪ್ರಾ ಆ ಕೇಂದ್ರ ಹಳ್ಳಕೆರೆ ಹುಂಡಿ	ಉದ್ಭವ್ ಗ್ರಾಮೀಣಾಭಿವೃದ್ಧಿ ಮತ್ತು ಶೈಕ್ಷಣಿಕ ಸಂಸ್ಥೆ(ಬೆಂಗಳೂರು
		ಯಳಂದೂರು(ತಾ)	36	ಪ್ರಾ ಆ ಕೇಂದ್ರ ಗುಂಬಳ್ಳಿ	ಕರುಣಾ ಟ್ರಸ್ಟ್, ಬೆಂಗಳೂರು
		ಗುಂಡ್ಲುಪೇಟೆ(ತಾ)	37	ಪ್ರಾ ಆ ಕೇಂದ್ರ, ಮಂಗಲ	ಆತ್ಮ ಜೀವನ ಡಯಾಲಿಸಿಸ್ ಸಂಸ್ಥೆ(ರಿ)
16	ಚಿಕ್ಕಮಗಳೂರು	ಕೊಪ್ಪ	38	ಪ್ರಾ.ಆ, ಕೇಂದ್ರ ಬಸರೀಕಟ್ಟೆ	ಕರುಣಾ ಟ್ರಸ್ಟ್ ಬೆಂಗಳೂರು
		ಮೂಡಿಗೆರೆ	39	ಪ್ರಾ.ಆ, ಕೇಂದ್ರ ಬಾಳೆಹೊಳೆ	ಶ್ರೀ ದಾನೇಶ್ವರಿ ಸೇವಾ ಸಂಸ್ಥೆ, ಬೆಳಗಾವಿ
17	ಕೊಡಗು	ಮಡಿಕೇರಿ	40	ಪ್ರಾ ಆ ಕೇಂದ್ರ ಸಂಪಾಜೆ	ಉದ್ಭವ್ ಗ್ರಾಮೀಣಾಭಿವೃದ್ಧಿ ಮತ್ತು ಶೈಕ್ಷಣಿಕ ಸಂಸ್ಥೆ(ಬೆಂಗಳೂರು
		ವಿರಾಜ ಪೇಟೆ	41	ಪ್ರಾ ಆ ಕೇಂದ್ರ, ಶ್ರೀಮಂಗಳ	ಕರುಣಾ ಟ್ರಸ್ಟ್ ಬೆಂಗಳೂರು
		ವಿರಾಜ ಪೇಟೆ	42	ಪ್ರಾ ಆ ಕೇಂದ್ರ ತಿತಮತಿ	ವಿವೇಕಾನಂದ ಪೌಂಡೇಷನ್ (ರಿ)ಮೈಸೂರು
		ವಿರಾಜ ಪೇಟೆ	43	ಪ್ರಾ ಆ ಕೇಂದ್ರ ಕಾನೂರು	ಗ್ರೀನ್ ಡಾಟ್ಸ್ ಟ್ರಸ್ಟ್(ರಿ) ಮೈಸೂರು
		ವಿರಾಜ ಪೇಟೆ	44	ಪ್ರಾ ಆ ಕೇಂದ್ರ , ಬಾಳೆಲೆ	ಐಶ್ವರ್ಯ ಚಾರಿಟಬಲ್ ಟ್ರಸ್ಟ್ (ರಿ) ಶಿವಮೊಗ್ಗ
18	ಮಂಡ್ಯ	ನಾಗಮಂಗಲ	45	ಸಮುದಾಯ ಆರೋಗ್ಯ ಕೇಂದ್ರ, ಬೆಳ್ಳೂರು	ಶ್ರೀ ಆದಿಚುಂಚನಗಿರಿ, ವೈದ್ಯಕೀಯ ವಿಜ್ಞಾನ ಸಂಸ್ಥೆ, ನಾಗಮಂಗಲ
19	ಮೈಸೂರು	ಪಿರಿಯಾಪಟ್ಟಣ	46	ಪ್ರಾ ಆ ಕೇಂದ್ರ ನಂದಿನಾಥಪುರ	ಉದ್ಭವ್ ಗ್ರಾಮೀಣಾಭಿವೃದ್ಧಿ ಮತ್ತು ಶೈಕ್ಷಣಿಕ ಸಂಸ್ಥೆ(ಬೆಂಗಳೂರು .
		ಎಚ್ ಡಿ ಕೋಟೆ	47	ಪ್ರಾ ಆ ಕೇಂದ್ರ ಎನ್ ಬೇಗೂರು	ಉದ್ಭವ್ ಗ್ರಾಮೀಣಾಭಿವೃದ್ಧಿ ಮತ್ತು ಶೈಕ್ಷಣಿಕ ಸಂಸ್ಥೆ(ಬೆಂಗಳೂರು
		ಎಚ್ ಡಿ ಕೋಟೆ	48	ಪ್ರಾ ಆ ಕೇಂದ್ರ ಡಿ ಬಿ ಕುಪ್ಪೆ	ಕರುಣಾ ಟ್ರಸ್ಟ್ ಬೆಂಗಳೂರು
		ನಂಜನಗೂಡು	49	ಪ್ರಾ ಆ ಕೇಂದ್ರ ಹೆಡಿಯಾಲ	ಉದ್ಭವ್ ಗ್ರಾಮೀಣಾಭಿವೃದ್ಧಿ ಮತ್ತು ಶೈಕ್ಷಣಿಕ ಸಂಸ್ಥೆ(ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	919
ಮಾನ್ಯ ಸದಸ್ಯರ ಹೆಸರು	:	ಶ್ರೀ ರಾಜಾ ವೆಂಕಟಪ್ಪ ನಾಯಕ್ (ಮಾನ್ವಿ)
ಉತ್ತರಿಸುವ ದಿನಾಂಕ	:	**04.02.2021**
ಉತ್ತರಿಸುವ ಸಚಿವರು	:	ಮಾನ್ಯ ಉಪ ಮುಖ್ಯ ಮಂತ್ರಿಗಳು (ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

ಪ್ರ ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಬೋಧಕ /ಬೋಧಕೇತರ ಹುದ್ದೆಗಳನ್ನು ಎ.ಐ.ಸಿ.ಟಿ.ಇ ನಿಯಮಾನುಸಾರ ಸೃಜಿಸಲಾಗಿದ್ದು, ಆ ಹುದ್ದೆಗಳು ಹಲವಾರು ವರ್ಷಗಳಿಂದ ಖಾಲಿ ಇರುವುದರಿಂದ ವಿದ್ಯಾರ್ಥಿಗಳ ತಾಂತ್ರಿಕ ವ್ಯಾಸಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನದಲ್ಲಿ ಪ್ರಸ್ತುತ 14 ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಸಂಸ್ಥೆಗಳಿಗೆ ಮಂಜೂರಾದ, ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ಮಾಹಿತಿ ಈ ಕೆಳಕಂಡಂತಿರುತ್ತದೆ.

ಇಂಜಿನಿಯರಿಂಗ್ ಕಾಲೇಜುಗಳು (ಬೋಧಕ)

ಕ್ರಸಂ	ಹುದ್ದೆಯ ವರ್ಗ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಎ	229	111	118
2	ಬಿ	417	235	182
	ಒಟ್ಟು	**646**	**346**	**300**

ಇಂಜಿನಿಯರಿಂಗ್ ಕಾಲೇಜುಗಳು (ಬೋಧಕೇತರ)

ಕ್ರಸಂ	ಹುದ್ದೆಯ ವರ್ಗ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದ್ದೆಗಳ ಸಂಖ್ಯೆ	ಖಾಲಿ ಇರುವ ಹುದ್ದೆಗಳ ಸಂಖ್ಯೆ
1	ಎ	10	0	10
2	ಬಿ	21	16	5
3	ಸಿ	680	111	569
4	ಡಿ	439	11	428
	ಒಟ್ಟು	**1150**	**138**	**1012**

ಖಾಲಿ ಇರುವ ಬೋಧಕ ಹುದ್ದೆಗೆದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರಸ್ತುತ 285 ಅರೆಕಾಲಿಕ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಂಡು ಪಾಠ ಪ್ರವಚನ ನಡೆಸಲಾಗುತ್ತಿದೆ ಮತ್ತು ಸಂಸ್ಥೆಗಳ ಆಡಳಿತಾತ್ಮಕ ಹಿತದೃಷ್ಟಿಯಿಂದ ಖಾಲಿ ಇರುವ ಗ್ರೂಪ್-ಡಿ ಹುದ್ದೆಗಳ ಎದುರಾಗಿ 190 ಹೊರಗುತ್ತಿಗೆ ನೌಕರರನ್ನು ನೇಮಿಸಿಕೊಂಡು ಕೆಲಸ ಕಾರ್ಯಗಳನ್ನು ನಿರ್ವಹಿಸಲಾಗುತ್ತಿದೆ.

ಆ)	ಸದರಿ ಕಾಲೇಜುಗಳಲ್ಲಿ ಖಾಲಿ ಇರುವ ಬೋಧಕ/ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲು ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಕೆಲವೊಂದು ತಿದ್ದುಪಡಿಗಳನ್ನು ತರುವ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಇ)	ಹಾಗಿದ್ದಲ್ಲಿ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸರ್ಕಾರಕ್ಕೆ ಇರುವ ತೊಂದರೆಗಳೇನು	ಸರ್ಕಾರಿ ಇಂಜಿನಿಯರಿಂಗ್ ಸಂಸ್ಥೆಗಳಲ್ಲಿನ ಬೋಧಕ ಸಿಬ್ಬಂದಿಗಳನ್ನು ಎಐಸಿಟಿಇ ನಿಯಮಗಳನ್ವಯ ಭರ್ತಿ ಮಾಡಬೇಕಾಗಿದ್ದು, ಮಾರ್ಚ್-2019ರಂದು 07ನೇ ಎಐಸಿಟಿಇ ನಿಯಮಗಳನ್ನು ಜಾರಿಗೆ ತರಲಾಗಿದ್ದು, ಇದರನ್ವಯ, ನೇಮಕಾತಿ ವಿಧಾನ, ವಿದ್ಯಾರ್ಹತೆ ಮತ್ತು ಸೇವಾ ಷರತ್ತುಗಳನ್ನು ವೃಂದ ಮತ್ತು ನೇಮಕಾತಿ ನಿಯಮಾವಳಿಗಳಲ್ಲಿ ಅಳವಡಿಸಿಕೊಂಡ ನಂತರ ಕ್ರಮಕೈಗೊಳ್ಳಬೇಕಾಗಿರುತ್ತದೆ. ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಜಾರಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಪರಿಷ್ಕರಿಸಲು, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರು ದಿನಾಂಕ: 12.12.2019ರಂದು ಸರ್ಕಾರಕ್ಕೆ ಸಲ್ಲಿಸಿದ್ದ ಪ್ರಸ್ತಾವನೆಯ ಬಗ್ಗೆ ಅಭಿಪ್ರಾಯ/ ಸಹಮತಿ ಕೋರಿ ಕಡತವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-2), ಸಂಸದೀಯ ವ್ಯವಹಾರಗಳ ಇಲಾಖೆ ಮತ್ತು ಆರ್ಥಿಕ ಇಲಾಖೆಗಳಿಗೆ ಕಳುಹಿಸಲಾಗಿತ್ತು. ಅದರಂತೆ, ಸದರಿ ಇಲಾಖೆಗಳು ನೀಡಿರುವ ಅಭಿಪ್ರಾಯ/ಸಹಮತಿಯನ್ನು ಕರಡು ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಅಳವಡಿಸಿ, ಪರಿಷ್ಕೃತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ದಿನಾಂಕ:13.05.2019 ಮತ್ತು 04.06.2020ರಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರನ್ನು ಕೋರಲಾಗಿರುತ್ತದೆ. ಈ ಬಗ್ಗೆ ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರಿಂದ ಪರಿಷ್ಕೃತ ಪ್ರಸ್ತಾವನೆ ಬಂದ ನಂತರ ನಿಯಮಾನುಸಾರ ಕ್ರಮ ವಹಿಸಲಾಗುವುದು. ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿನಾಂಕ:06.07.2020ರಲ್ಲಿ 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳನ್ನು ಹಾಗೂ ಬ್ಯಾಕ್-ಲಾಗ್ ಹುದ್ದೆಗಳು ಸೇರಿದಂತೆ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿದೆ ಎಂದು ಸೂಚಿಸಲಾಗಿರುತ್ತದೆ ಮತ್ತು ಆರ್ಥಿಕ ಇಲಾಖೆಯು ಪತ್ರ ಸಂಖ್ಯೆ:ಆಇ 141 ಎಫ್‌ಆರ್.ಸಿ 2020, ದಿನಾಂಕ: 07.09.2020ರಲ್ಲಿ 2020-21ನೇ ಸಾಲಿನಲ್ಲಿ ನೇಮಕಾತಿಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಮುಂದಿನ ಆರ್ಥಿಕ ವರ್ಷದಲ್ಲಿ
ಈ)	ಯಾವ ಕಾಲಮಿತಿಯೊಳಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತಂದು ಖಾಲಿ ಇರುವ ಬೋಧಕ/ ಬೋಧಕೇತರ ಹುದ್ದೆಗಳನ್ನು ಭರ್ತಿ ಮಾಡಲಾಗುವುದು?	

		ಕೈಗೊಳ್ಳುವಂತೆ ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಇಲಾಖೆಯು ಆರ್ಥಿಕ ನಿರ್ಬಂಧವನ್ನು ತೆರವುಗೊಳಿಸಿದ ನಂತರ ಹಾಗೂ ಇಲಾಖಾ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿಗಳನ್ನು ಹೊರಡಿಸಿದ ನಂತರ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.

ಇಡಿ 15 ಟಿಪಿಇ 2021

(ಡಾ॥ ಅಶ್ವತ್ಥನಾರಾಯಣ್.ಸಿ.ಎನ್)
ಉಪ ಮುಖ್ಯ ಮಂತ್ರಿಗಳು
(ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ
ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	926
ಮಾನ್ಯ ಸದಸ್ಯರ ಹೆಸರು	:	ಶ್ರೀ ರವೀಂದ್ರ ಶ್ರೀಕಂಠಯ್ಯ (ಶ್ರೀರಂಗಪಟ್ಟಣ)
ಉತ್ತರಿಸಬೇಕಾದ ದಿನಾಂಕ	:	4-2-2021
ಉತ್ತರಿಸುವ ಸಚಿವರು	:	ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದುರಸ್ತಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 8 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. ಅವು:- 1. ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಡಿಯಾಲ, 2. ಪ್ರಾಥಮಿಕ ಆರೋಗ್ಯ ಕೇಂದ್ರ, ಕೆ. ಶೆಟ್ಟಿಹಳ್ಳಿ 3. ಪ್ರಾಥಮಿಕ ಆರೋಗ್ಯ ಕೇಂದ್ರ, ಟಿ.ಎಂ. ಹೊಸೂರು 4. ಪ್ರಾಥಮಿಕ ಆರೋಗ್ಯ ಕೇಂದ್ರ, ಮಹದೇವಪುರ 5. ಪ್ರಾಥಮಿಕ ಆರೋಗ್ಯ ಕೇಂದ್ರ, ಪಾಲಹಳ್ಳಿ 6. ಪ್ರಾಥಮಿಕ ಆರೋಗ್ಯ ಕೇಂದ್ರ, ಕೆ.ಆರ್. ಸಾಗರ 7. ಪ್ರಾಥಮಿಕ ಆರೋಗ್ಯ ಕೇಂದ್ರ, ಬಲ್ಲೇನಹಳ್ಳಿ 8. ಪ್ರಾಥಮಿಕ ಆರೋಗ್ಯ ಕೇಂದ್ರ, ಬೆಳಗೋಳ ಸದರಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿ ಬಗ್ಗೆ ಸರ್ಕಾರದಲ್ಲಿ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.
ಆ	ಹಾಗಿದ್ದಲ್ಲಿ, ಸರ್ಕಾರ ಯಾವಾಗ ದುರಸ್ತಿಗೆ ಕ್ರಮ ಕೈಗೊಳ್ಳುವುದು;	ಉದ್ಭವಿಸುವುದಿಲ್ಲ.
ಇ	ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಅರಕೆರೆ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವು ಶಿಥಿಲಾವಸ್ಥೆಯಲ್ಲಿದ್ದು, ಅದನ್ನು ದುರಸ್ತಿ ಪಡಿಸಲು ಸರ್ಕಾರವು ಕೈಗೊಂಡ ಕ್ರಮಗಳೇನು;	ಅರಕೆರೆ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಈ ಹಿಂದೆಯೇ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದ್ದು, ಅರಕೆರೆ, ಸಮುದಾಯ ಆರೋಗ್ಯ ಆರೋಗ್ಯ ಕೇಂದ್ರವು ಹೊಸಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಹಳೇ ಕಟ್ಟಡವನ್ನು ಲ್ಯಾಪ್ರೋಸ್ಕೋಪಿಕ್ ರೋಗಿಗಳಿಗೆ, ಉದರ ಶಸ್ತ್ರ ಚಿಕಿತ್ಸೆ ನೀಡಲು ಉಪಯೋಗಿಸಲಾಗುತ್ತಿದೆ. ಸದರಿ ಹಳೆ ಕಟ್ಟಡದಲ್ಲಿ ಲ್ಯಾಬ್ ಹಾಗೂ ಎಕ್ಸರೇ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.
ಈ	ಸದರಿ ಆರೋಗ್ಯ ಕೇಂದ್ರವನ್ನು ದುರಸ್ತಿಪಡಿಸಲು ಅವಶ್ಯವಿರುವ ಅನುದಾನವನ್ನು ಸರ್ಕಾರವು ಮೀಸಲಿರಿಸಿದೆಯೇ?	ಅರಕೆರೆ, ಸಮುದಾಯ ಆರೋಗ್ಯ ಕೇಂದ್ರದ ಮೇಲ್ಛಾವಣಿಯ ದುರಸ್ತಿ ಕಾರ್ಯ ಅಗತ್ಯವಿರುವುದಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಂಡ್ಯ ಇವರಿಂದ ತಿಳಿದು ಬಂದಿದ್ದು, 2021-22ನೇ ಸಾಲಿನಲ್ಲಿ ಆದ್ಯತೆಗೆ ಅನುಗುಣವಾಗಿ ಕ್ರಮವಹಿಸಲಾಗುವುದು.

ಆಕುಕ 18 ಎಸ್.ಎಂ.ಎಂ. 2021

(ಡಾ: ಕೆ.ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1083

ಮಾನ್ಯ ಸದಸ್ಯರ ಹೆಸರು : ಶ್ರೀ ರಾಮದಾಸ್ ಎಸ್.ಎ (ಕೃಷ್ಣರಾಜ)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು

ಉತ್ತರಿಸುವ ದಿನಾಂಕ : 04-02-2021

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಮೈಸೂರು ನಗರ ಮತ್ತು ಜಿಲ್ಲೆಯನ್ನು ಒಂದು 'ಪ್ರವಾಸೋದ್ಯಮ ಕೇಂದ್ರ' ಎಂದು ಭೂಪಟದಲ್ಲಿ ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ಸದರಿ ಪ್ರವಾಸೋದ್ಯಮ ಕೇಂದ್ರದ ಅಭಿವೃದ್ಧಿಗೆ ಕೈಗೊಂಡಿರುವ ಕ್ರಮಗಳೇನು;	ಮೈಸೂರು ಜಿಲ್ಲೆಯಲ್ಲಿ ಮೈಸೂರು ನಗರ, ಬೈಲುಕುಪ್ಪೆ, ನಂಜನಗೂಡು, ಮತ್ತು ಸೋಮನಾಥಪುರವನ್ನು 2020-25ರ ಕರ್ನಾಟಕ ಪ್ರವಾಸೋದ್ಯಮ ನೀತಿಯಡಿ, ಕೇಂದ್ರೀಕೃತ ಪ್ರವಾಸೋದ್ಯಮ ತಾಣವಾಗಿ ಗುರುತಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಹಾಗೂ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಪ್ರವಾಸಿ ತಾಣಗಳಲ್ಲಿ ಯಾತ್ರಿನಿವಾಸ, ಡಾರ್ಮಿಟರಿ, ಶೌಚಾಲಯ, ಕುಡಿಯುವ ನೀರು, ಸಂಪರ್ಕ ರಸ್ತೆ ಇತ್ಯಾದಿ ಕಾಮಗಾರಿಗಳನ್ನು ಅಗತ್ಯತೆ ಅನುಗುಣವಾಗಿ ಪರಿಶೀಲಿಸಿ ಕೈಗೊಳ್ಳಲಾಗುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಮೈಸೂರು ಜಿಲ್ಲೆಯಲ್ಲಿ ಬಂಡವಾಳ ವೆಚ್ಚಗಳಡಿ ಹಾಗೂ ಕರ್ನಾಟಕ ಟೂರಿಸಂ ವಿಷನ್ ಗ್ರೂಪ್ ಅಡಿ ಒಟ್ಟು 65 ಕಾಮಗಾರಿಗಳನ್ನು ರೂ.7122.50ಲಕ್ಷಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದ್ದು, ರೂ.3776.75ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ವಿವರ ಅನುಬಂಧದಲ್ಲಿ ಲಗತ್ತಿಸಿದೆ. ಜಿಲ್ಲೆಯ ಪ್ರವಾಸಿ ತಾಣಗಳ ಬಗ್ಗೆ ವಿವಿಧ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ.
ಆ)	ಮೈಸೂರು ಜಿಲ್ಲೆಯನ್ನು ಹೆರಿಟೇಜ್ ಟೂರಿಸಂ, ಹೆಲ್ತ್ ಟೂರಿಸಂ, ಎಜುಕೇಷನ್ ಟೂರಿಸಂ (ಯೋಗ ಶಿಕ್ಷಣವು ಸೇರಿದಂತೆ) ಪರಿಸರ ಟೂರಿಸಂ, ಚಿತ್ರೀಕರಣ ಟೂರಿಸಂಗಳ ಮೂಲಕ ಅಭಿವೃದ್ಧಿ ಮಾಡಲು ಸರ್ಕಾರ ಚಿಂತನೆ ಮಾಡಿದೆಯೇ;	ಹೌದು. ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಲ್ಲಿ ಮೈಸೂರು ಜಿಲ್ಲೆ ಒಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವಂತೆ ಹೆರಿಟೇಜ್ ಸ್ವಾಸ್ಥ್ಯ, ಶಿಕ್ಷಣ, ಪರಿಸರ, ಟೂರಿಸಂಗಳನ್ನು ಪ್ರವಾಸೋದ್ಯಮದ ಉತ್ಪನ್ನಗಳನ್ನಾಗಿ ಗುರುತಿಸಿದ್ದು, ಈ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಉದ್ದಿಮೆದಾರರಿಗೆ ಸಹಾಯಧನ, ರಿಯಾಯತಿಗಳನ್ನು ನೀಡಲು ಯೋಜನೆ ರೂಪಿಸಲಾಗಿದೆ.
ಇ)	ಮಾಡಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	

......2.......

ಈ)	ಪ್ರವಾಸೋದ್ಯಮ ಅಭಿವೃದ್ಧಿಗೆ ಅವಶ್ಯವಿರುವ ತೆರಿಗೆ ವಿನಾಯಿತಿ, ಸಬ್ಸಿಡಿ ಮತ್ತಿತರೆ ಇತರೆ ಸೌಲಭ್ಯಗಳನ್ನು ನೀಡಲು ಪ್ರವಾಸೋದ್ಯಮ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆಯೇ? (ವಿವರ ನೀಡುವುದು)	ಹೌದು. ತೆರಿಗೆ ವಿನಾಯಿತಿ, ಸಬ್ಸಿಡಿ ಮತ್ತು ಪ್ರವಾಸೋದ್ಯಮಕ್ಕೆ ಅಭಿವೃದ್ಧಿ/ ಉತ್ತೇಜನ ನೀಡುವ ಇತರೆ ಸೌಲಭ್ಯಗಳನ್ನು ಪ್ರವಾಸೋದ್ಯಮ ಪಾಲಿಸಿಯಲ್ಲಿ ಅಳವಡಿಸಲಾಗಿದೆ (ಪ್ರತಿ ಲಗತ್ತಿಸಲಾಗಿದೆ).

ಸಂಖ್ಯೆ: ಟಿಓಆರ್ 03 ಟಿಡಿವಿ 2021

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ ಮತ್ತು
ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು

ಮೈಸೂರು ಜಿಲ್ಲೆಯಲ್ಲಿ ಬಂಡವಾಳ ವೆಚ್ಚಗಳ ಅಡಿ ಕೈಗೆತ್ತಿಕೊಂಡಿರುವ ಕಾಮಗಾರಿಗಳ ವಿವರ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
1	2	3	4	5	6	7	8
	ಮೈಸೂರು ಜಿಲ್ಲೆ						
	ಮೈಸೂರು ತಾಲ್ಲೂಕು						
1	ಕರ್ನಾಟಕ ಜ್ಞಾನ ಆಯೋಗದ ಶಿಫಾರಸ್ಸಿನಂತೆ ಕಾವೇರಿ ನದಿಯ ಕುರಿತು ಮೈಸೂರಿನಲ್ಲಿ ಬಹುಮಾಧ್ಯಮ ಗ್ಯಾಲರಿ ಸ್ಥಾಪನೆ	2017–18	350.00	ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡೆಮಿ, ಅಲಹಾಬಾದ್	200.00	–	–
2	ಮೈಸೂರು ತಾಲ್ಲೂಕು, ನಿಲವಾಲ ಹೋಬಳಿ ನಾಗವಾಲ ಗ್ರಾಮದಲ್ಲಿರುವ ಶ್ರೀ ಸೋಮೇಶ್ವರ ದೇವಸ್ಥಾನದ ಹತ್ತಿರ ಮೂಲಸೌಕರ್ಯ ಅಭಿವೃದ್ಧಿ	2017–18	50.00	ಲೋಕೋಪಯೋಗಿ ಇಲಾಖೆ	30.00	10.00	–
3	ಮೈಸೂರು ಜಿಲ್ಲೆಯ ಮೈಸೂರಿನ ಚಾಮುಂಡಿ ಬೆಟ್ಟದ ನಂದಿ ಪ್ರವಾಸಿ ತಾಣವನ್ನು ಸಂಪರ್ಕಿಸುವ ಬುಲ್ ವ್ಯೂ ರಸ್ತೆ 1.00 ಕಿ.ಮೀ. ನಿಂದ 1.40 ಕಿ.ಮೀ ರವರೆಗಿನ ರಸ್ತೆಯನ್ನು ಅಭಿವೃದ್ಧಿಪಡಿಸುವುದು. (ಫುಟ್ಪಾತ್, ರಿಟೈನಿಂಗ್‌ವಾಲ್ ನಿರ್ಮಾಣ, ಡ್ರೈನೇಜ್ ಹಾಗೂ ಇತರೆ ಕಾಮಗಾರಿಗಳನ್ನು ಒಳಗೊಂಡಂತೆ.) **(20 ಪ್ರವಾಸಿ ತಾಣಗಳ ಅಭಿವೃದ್ಧಿ ಕೂಡುರಸ್ತೆ ಕಾಮಗಾರಿ)**	2017–18	120.00	ಲೋಕೋಪಯೋಗಿ ಇಲಾಖೆ	90.00	–	–
4	ಮೈಸೂರು ತಾಲ್ಲೂಕು ಜಯಪುರ ಗ್ರಾಮದಲ್ಲಿರುವ ಪ್ರವಾಸಿ ಕೇಂದ್ರವಾದ ಶ್ರೀ ಜೇಡಿಕಟ್ಟೆ ಮಹದೇಶ್ವರ ದೇವಸ್ಥಾನದ ಆವರಣದ ಅಭಿವೃದ್ಧಿಗೆ ಹಾಗೂ ಯಾತ್ರಿ ನಿವಾಸ ನಿರ್ಮಾಣ ಅಭಿವೃದ್ಧಿ.	2018–19	300.00	ಲೋಕೋಪಯೋಗಿ ಇಲಾಖೆ	–	50.00	–
5	ಮೈಸೂರು ತಾಲ್ಲೂಕು, ಕೆ.ಆರ್.ಎಸ್. ಹಿನ್ನೀರಿನಲ್ಲಿರುವ ಮೀನಾಕ್ಷಿ ಪ್ರವಾಸಿ ತಾಣದ ಅಭಿವೃದ್ಧಿ.	2018–19	50.00	ಕೆಟಿಐಎಲ್	–	30.00	–
6	ಮೈಸೂರು ತಾ॥ ಜಯಪುರ ಹೋಬಳಿ ಮುಳ್ಳೂರು, ಸೋಮೇಶ್ವರ ದೇವಸ್ಥಾನ, ಮೂಲಸೌಕರ್ಯ ಕಾಮಗಾರಿಗಳು.	2018–19	30.00	ಲೋಕೋಪಯೋಗಿ ಇಲಾಖೆ	–	30.00	–

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
7	ಮೈಸೂರು ತಾ॥ ಇಲವಾಲ ಹೋಬಳಿ ಕಲ್ಲೂರು ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಮೂಲಸೌಕರ್ಯ ಕಾಮಗಾರಿಗಳು.	2018–19	30.00	ಲೋಕೋಪಯೋಗಿ ಇಲಾಖೆ	–	30.00	–
8	ಮೈಸೂರು ತಾಲ್ಲೂಕು ಮಂಡಕಹಳ್ಳಿ ಗ್ರಾಮ ಮಹದೇಶ್ವರ ದೇವಸ್ಥಾನ ಬಳಿ ಮೂಲಭೂತ ಸೌಕರ್ಯ. (ಸರ್ಕಾರದ ಆದೇಶ ಸಂಖ್ಯೆ TOR 72 TDP 2019, ದಿ.30.11.2019.)	2019–20	100.00	ಕೆಟಿಐಎಲ್	–	–	35.00
9	ಮೈಸೂರು ತಾಲ್ಲೂಕು ಬೋಗಾದಿ ಗ್ರಾಮ ಬಸವೇಶ್ವರ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ.(ಸರ್ಕಾರದ ಆದೇಶ ಸಂಖ್ಯೆ TOR 72 TDP 2019, ದಿ.30.11.2019.)	2019–20	50.00	ಕೆಟಿಐಎಲ್	–	–	40.00
10	ಮೈಸೂರು ತಾಲ್ಲೂಕು ಬಂಡಿಪಾಳ್ಯ ಗ್ರಾಮ ಬಸವೇಶ್ವರ ದೇವಸ್ಥಾನ ಬಳಿ ಮೂಲಭೂತ ಸೌಕರ್ಯ..(ಸರ್ಕಾರದ ಆದೇಶ ಸಂಖ್ಯೆ TOR 72 TDP 2019, ದಿ.30.11.2019.)	2019–20	50.00	ಕೆಟಿಐಎಲ್	–	–	40.00
11	ಮೈಸೂರು ತಾಲ್ಲೂಕು ಕೂರ್ಗಳ್ಳಿ ಗ್ರಾಮದ ಶ್ರೀ ಬಿಲ್ಲೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ.	2019–20	100.00	ಕೆಆರ್ ಐಡಿಎಲ್	–	–	33.00
12	ಮೈಸೂರು ತಾಲ್ಲೂಕು ರಮ್ಮನಹಳ್ಳಿಯ ಪುರಾತನ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿ.	2019–20	25.00	ಕೆಆರ್ ಐಡಿಎಲ್	–	–	8.00
13	ಚಾಮರಾಜ ಕ್ಷೇತ್ರದಲ್ಲಿ ವಿನೂತನ ರೀತಿಯ ದೀಪಗಳನ್ನು ಅಳವಡಿಸುವ ಕಾಮಗಾರಿ.	2019–20	100.00	ಕೆಆರ್ ಐಡಿಎಲ್	–	–	33.00
	ಮೈಸೂರು ತಾಲ್ಲೂಕಿನ ಮೊತ್ತ		1355.00		320.00	150.00	189.00
	ಹುಣಸೂರು ತಾಲ್ಲೂಕು						
14	ಹುಣಸೂರು ತಾಲ್ಲೂಕು ಮೈಸೂರು–ಕೆ.ಆರ್.ನಗರ ರಸ್ತೆಯಿಂದ ಕಂತೇಗೌಡನ ಕೊಪ್ಪಲು, ಹುಸೇನ್‌ಪುರ ಮಾರ್ಗವಾಗಿ ಗೊಮ್ಮಟಗಿರಿ ಕ್ಷೇತ್ರಕ್ಕೆ ಹೋಗುವ ರಸ್ತೆ ಅಭಿವೃದ್ಧಿ.	2017–18	100.00	ಲೋಕೋಪಯೋಗಿ ಇಲಾಖೆ	100.00	–	–

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
15	ಹುಣಸೂರು ತಾಲ್ಲೂಕಿನ ಹುಣಸೂರು–ಪಿರಿಯಾಪಟ್ಟಣ ರಸ್ತೆ ಮಾರ್ಗ ನಿಲುವಾಗಿಲು-ಹನಗೋಡು ಪಂಚವಳ್ಳಿ ರಸ್ತೆ ಸರಪಳಿ ಕಿ.ಮೀ 19.00 ರಿಂದ 22.45 ರಸ್ತೆ ಅಭಿವೃದ್ಧಿ. (20 ಪ್ರವಾಸಿ ತಾಣಗಳ ಅಭಿವೃದ್ಧಿ ಯೋಜನೆ)	2017–18	200.00	ಲೋಕೋಪಯೋಗಿ ಇಲಾಖೆ	200.00	–	–
16	ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕು, ಮಾದಹಳ್ಳಿ ಉಕ್ಕಿನಕಂತೆ ಮಠದ ಹತ್ತಿರ ಯಾತ್ರಿನಿವಾಸ ನಿರ್ಮಾಣ.	2017–18	25.00	ಕೆಆರ್ ಐಡಿಎಲ್	15.00	–	–
17	ಹುಣಸೂರು ಕ್ಷೇತ್ರದ ಓಂಕಾರೇಶ್ವರ ಬೆಟ್ಟದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	2018–19	25.00	ಕೆಆರ್ ಐಡಿಎಲ್	–	25.00	–
18	ಸೋಲನಹಳ್ಳಿ ಭೈರವೇಶ್ವರ ಬೆಟ್ಟದ ಬಳಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ	2018–19	25.00	ಕೆಆರ್ ಐಡಿಎಲ್	–	25.00	–
19	ಹುಣಸೂರು ತಾಲ್ಲೂಕಿನ ರಾಮೇನಹಳ್ಳಿ ರಸ್ತೆಯಲ್ಲಿರುವ ಸುಪ್ರಸಿದ್ಧ ಓಂಕಾರೇಶ್ವರ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ.	2019–20	25.00	ಕೆಆರ್ ಐಡಿಎಲ್	–	–	8.00
20	ಹುಣಸೂರು ತಾಲ್ಲೂಕಿನ ನಲ್ಲೂರುಪಾಲ ಹರಳಹಳ್ಳಿ ಮುಖ್ಯ ರಸ್ತೆಯಲ್ಲಿರುವ ಆದಿವಾಸಿಗಳ ಆರಾಧ್ಯ ದೈವ ಶ್ರೀ ಕಲ್ಲೂರಪ್ಪನಬೆಟ್ಟ ಅಭಿವೃದ್ಧಿ ಕಾಮಗಾರಿ.	2019–20	25.00	ಕೆಆರ್ ಐಡಿಎಲ್	–	–	8.00
21	ಹುಣಸೂರು ತಾಲ್ಲೂಕಿನ ಮಡಿಕೇರಿ ರಸ್ತೆಯಲ್ಲಿರುವ ಜಗತ್ ಪ್ರಸಿದ್ಧ ಐಯಪ್ಪ ಸ್ವಾಮಿ ಬೆಟ್ಟ ಅಭಿವೃದ್ಧಿ ಕಾಮಗಾರಿ.	2019–20	20.00	ಕೆಆರ್ ಐಡಿಎಲ್	–	–	7.00
	ಹುಣಸೂರು ತಾಲ್ಲೂಕಿನ ಮೊತ್ತ		445.00		315.00	50.00	23.00
	ಟೀ.ನರಸೀಪುರ ತಾಲ್ಲೂಕು						
22	ಮೈಸೂರು ಜಿಲ್ಲೆ ಟಿ.ನರಸೀಪುರ ಪಟ್ಟಣದಲ್ಲಿ ನಳಂದ ಬುದ್ಧ ವಿಹಾರದ ಹತ್ತಿರ ಯಾತ್ರಿನಿವಾಸ ನಿರ್ಮಾಣ.	2017–18	50.00	ಕೆಆರ್ ಐಡಿಎಲ್	20.00	25.00	–
23	ಮೂಗೂರಿನ ಶ್ರೀ ತ್ರಿಪುರ ಸುಂದರಿ ದೇವಾಲಯದ ಬಳಿ ರಾಜಗೋಪುರ ನಿರ್ಮಾಣ ಹಾಗೂ ಇತರೆ ಸಂರಕ್ಷಣಾ ಕಾಮಗಾರಿಗಳು	2018–19	500.00	ಪುರಾತತ್ವ ಪರಂಪರೆ ಇಲಾಖೆ	–	100.00	180.00

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂ ರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
24	ಮೈಸೂರು ಜಿಲ್ಲೆ, ಟಿ ನರಸೀಪುರ ತಾಲ್ಲೂಕಿನ ಚಿದರಹಳ್ಳಿ ಗ್ರಾಮದಲ್ಲಿರುವ ಶ್ರೀ ಸಿದ್ದೇಶ್ವರ ದೇವಾಲಯದ ಸಂರಕ್ಷಣೆ ಕಾಮಗಾರಿ	2018–19	96.00	ಪುರಾತತ್ವ ಪರಂಪರೆ ಇಲಾಖೆ	–	50.00	–
	ಟೀ.ನರಸೀಪುರ ತಾಲ್ಲೂಕಿನ ಮೊತ್ತ		646.00		20.00	175.00	180.00
	ಹೆಚ್.ಡಿ.ಕೋಟೆ ತಾಲ್ಲೂಕು						
25	ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ತಾಲ್ಲೂಕಿನ ಅಂತರಸಂತೆ ಗ್ರಾಮದಲ್ಲಿ ಸಾರನಾಥ ಬುದ್ಧ ವಿಹಾರದ ಹತ್ತಿರ ಯಾತ್ರಿನಿವಾಸ ನಿರ್ಮಾಣ.	2017–18	25.00	ಕೆಆರ್ ಐಡಿಎಲ್	10.00	–	–
26	ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ ತಾಲ್ಲೂಕು, ಕುಂದೂರು ಶ್ರೀ ಚಿಕ್ಕದೇವಮ್ಮನವರ ಕ್ಷೇತ್ರದಲ್ಲಿ ಮೂಲಭೂತ ಸೌಕರ್ಯ, ಉದ್ಯಾನವನ ನಿರ್ಮಾಣ.	2018–19	100.00	ಲೋಕೋಪಯೋಗಿ ಇಲಾಖೆ	–	50.00	25.00
	ಹೆಚ್.ಡಿ.ಕೋಟೆ ತಾಲ್ಲೂಕಿನ ಮೊತ್ತ		125.00		10.00	50.00	25.00
	ನಂಜನಗೂಡು ತಾಲ್ಲೂಕು						
27	ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಹದಿನಾರು ಗ್ರಾಮದಲ್ಲಿರುವ ಶ್ರೀ ಗುರುಮಲ್ಲೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ ನಿರ್ಮಾಣ	2017–18	50.00	ಕೆಆರ್ ಐಡಿಎಲ್	25.00	–	–
28	ಬದನವಾಳು ಗ್ರಾಮದಲ್ಲಿರುವ ವೀವಿಂಗ್ ಕೇಂಧ್ರವನ್ನು ಸಾಬರಮತಿ ಆಶ್ರಮದ ಮಾದರಿಯಲ್ಲಿ ಅಭಿವೃದ್ಧಿಪಡಿಸುವುದು.	2018–19	100.00	ಕೆಆರ್ ಐಡಿಎಲ್	–	50.00	–
29	ನಂಜುನಗೂಡು ತಾಲ್ಲೂಕು, ಹುಲ್ಲಹಳ್ಳಿ ಹೋಬಳಿ, ರಾಂಪುರ ಗ್ರಾಮದ ರಾಮಲಿಂಗೇಶ್ವರ ದೇವಸ್ಥಾನದ ಬಳಿ ಮೂಲಭೂತ ಸೌಕರ್ಯ ನಿರ್ಮಾಣ.	2019–20	30.00	ಕೆಆರ್ ಐಡಿಎಲ್	–	–	10.00
30	ನಂಜುನಗೂಡು ತಾಲ್ಲೂಕು ದೊಡ್ಡಕವಲಂದೆ ಹೋಬಳಿ, ಹೆಡತಲೆ ಗ್ರಾಮದ ಶ್ರೀ ನಗರೇಶ್ವರ ಸ್ವಾಮಿ ದೇವಸ್ಥಾನದ ಬಳಿ ಯಾತ್ರಿನಿವಾಸ ಕಾಮಗಾರಿ.	2019–20	50.00	ಕೆಆರ್ ಐಡಿಎಲ್	–	–	17.00
31	ನಂಜನಗೂಡು ತಾಲ್ಲೂಕು ಕಂತೆ ಮಾದಪ್ಪನ ಬೆಟ್ಟದ ರಸ್ತೆ, ಚರಂಡಿ, ಯಾತ್ರಿನಿವಾಸ ನಿರ್ಮಾಣ.	2019–20	100.00	ಕೆಆರ್ ಐಡಿಎಲ್	–	–	33.00
	ನಂಜನಗೂಡು ತಾಲ್ಲೂಕಿನ ಮೊತ್ತ		330.00		25.00	50.00	60.00

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
	ಕೆ.ಆರ್.ನಗರ ತಾಲ್ಲೂಕು						
32	ಕೃಷ್ಣರಾಜ ನಗರ ತಾಲ್ಲೂಕಿನಲ್ಲಿರುವ ಚುಂಚಿನಕಟ್ಟೆ ಜಲಪಾತದ ಪ್ರದೇಶದಲ್ಲಿ ಚೈನ್‌ಲಿಂಕ್ ಫೆನ್ಸಿಂಗ್ ಚುಂಚನಕಟ್ಟೆ ವೃತ್ತ ಅಭಿವೃದ್ಧಿ ಹಾಗೂ ಪ್ರವೇಶ ದ್ವಾರಕ್ಕೆ ಆರ್ಚ್ ನಿರ್ಮಾಣ, ಉಪಹಾರ ಗೃಹ, ಶೌಚಾಲಯ, ವಾಚ್‌ಟವರ್, ಲ್ಯಾಂಡ್ ಸ್ಕೇಪಿಂಗ್, ಸೋಲಾರ್ ಲೈಟಿಂಗ್, ಕಾರಂಜಿ, ಮಕ್ಕಳ ಆಟದ ಪ್ರದೇಶ, ಜಿಪ್‌ಲೈನ್ ನಿರ್ಮಾಣ ಹಾಗೂ ಸಂಪರ್ಕ ರಸ್ತೆ ಅಭಿವೃದ್ಧಿ	2018-19	825.00	ಲೋಕೋಪಯೋಗಿ ಇಲಾಖೆ	–	250.00	368.25
33	ಕೃಷ್ಣರಾಜ ನಗರ ತಾಲ್ಲೂಕಿನಲ್ಲಿರುವ ಶ್ರೀ ಅರ್ಕೇಶ್ವರ ದೇವಸ್ಥಾನದ ಬಳಿ ಸೋಪಾನ ಕಟ್ಟೆ ಯಾತ್ರಿ ಧಾಮ ಲ್ಯಾಂಡ್ ಸ್ಕೇಪಿಂಗ್ ಮುಂತಾದ ಸೌಲಭ್ಯಗಳ ನಿರ್ಮಾಣ	2018-19	354.00		–	150.00	–
34	ಕೃಷ್ಣರಾಜನಗರ ತಾಲ್ಲೂಕಿನ ಹೆಬ್ಬಾಳು ಹೋಬಳಿಯ ಕಪ್ಪಡಿ ಕ್ಷೇತ್ರದ ರಸ್ತೆ ಅಭಿವೃದ್ಧಿ	2018-19	200.00	ಲೋಕೋಪಯೋಗಿ ಇಲಾಖೆ	–	100.00	50.00
35	ಕೆ.ಆರ್. ನಗರ ತಾಲ್ಲೂಕು, ಕಸಬಾ ಹೋಬಳಿ, ತಿಪ್ಪೂರು ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ದೇವಾಲಯದ ಬಳಿ ಪ್ರವಾಸಿ ಮೂಲಸೌಕರ್ಯ ಅಭಿವೃದ್ಧಿ.	2018-19	200.00	ಲೋಕೋಪಯೋಗಿ ಇಲಾಖೆ	–	50.00	–
36	ಕೆ.ಆರ್. ನಗರ ತಾಲ್ಲೂಕು, ಮಿರ್ಲೆ ಗಣಪತಿ ದೇವಸ್ಥಾನದ ಬಳಿ ಪ್ರವಾಸಿ ಮೂಲ ಸೌಕರ್ಯ ಅಭಿವೃದ್ಧಿ.	2018-19	25.00	ನಿರ್ಮಿತಿ ಕೇಂದ್ರ	–	10.00	–
37	ಮೈಸೂರು ಜಿಲ್ಲೆ ಕೆ.ಆರ್.ನಗರ ತಾ॥ ಮೇಲೂರು ಗ್ರಾಮದ ಶಂಭುಲಿಂಗೇಶ್ವರ ದೇವಾಲಯಕ್ಕೆ ಸಂಪರ್ಕರಸ್ತೆ ಮತ್ತು ಮೂಲಭೂತ ಸೌಕರ್ಯ ಕಾಮಗಾರಿ	2018-19	200.00	ಕೆಆರ್ ಐಡಿಎಲ್	–	0.00	–
38	ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕಿನ ಸಾಲಿಗ್ರಾಮ ಹಾಗೂ ತಿಪ್ಪೂರು ಗ್ರಾಮದಲ್ಲಿರುವ ಶ್ರೀ ಜ್ಯೋತಿಮಹೇಶ್ವರಸ್ವಾಮಿ ದೇವಸ್ಥಾನದ ಸಂರಕ್ಷಣಾ ಕಾಮಗಾರಿ.	2018-19	138.00	ಪುರಾತತ್ವ ಪರಂಪರೆ ಇಲಾಖೆ	–	–	59.00
39	ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕು, ತಿಪ್ಪೂರು ಗ್ರಾಮದಲ್ಲಿರುವ ಶ್ರೀ ಲಕ್ಷ್ಮಿನಾರಾಯಣಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ	2018-19	238.00	ಪುರಾತತ್ವ ಪರಂಪರೆ ಇಲಾಖೆ	–	50.00	40.00

(ರೂ.ಲಕ್ಷಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
40	ಮೈಸೂರು ಜಿಲ್ಲೆ ಕೆ.ಆರ್.ನಗರ ತಾಲ್ಲೂಕು, ಮಿರ್ಲೆ ಹೋಬಳಿ, ಮಿರ್ಲೆ ಗ್ರಾಮದ ವಿರೂಪಾಕ್ಷೇಶ್ವರ (ಈಶ್ವರ) ದೇವಸ್ಥಾನ ಅಭಿವೃದ್ಧಿ ಕಾಮಗಾರಿ.	2018-19	74.00	ಪುರಾತತ್ವ ಪರಂಪರೆ ಇಲಾಖೆ	–	24.00	10.00
41	ಮೈಸೂರು ಜಿಲ್ಲೆ, ಕೆ.ಆರ್.ನಗರ ಸಾಲಿಗ್ರಾಮ ಹೋಬಳಿ ಮೂಡಲಬೀಡು ಗ್ರಾಮದ ಶ್ರೀ ಆಂಜನೇಯ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ.	2018-19	60.00	ನಿರ್ಮಿತಿ ಕೇಂದ್ರ	–	20.00	–
42	ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಸಾಲಿಗ್ರಾಮ ಗ್ರಾಮದಲ್ಲಿರುವ ಶ್ರೀ ರಾಮಾನುಜಚಾರ್ಯ (ಭಾಸ್ಕರಸ್ವಾಮಿ) ದೇವಾಲಯದ ಸಂರಕ್ಷಣಾ ಕಾಮಗಾರಿ.	2018-19	74.00	ಪುರಾತತ್ವ ಪರಂಪರೆ ಇಲಾಖೆ	–	30.00	18.00
43	ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲ್ಲೂಕು, ಸಾಲಿಗ್ರಾಮ ಗ್ರಾಮದಲ್ಲಿರುವ ಶ್ರೀ ಯೋಗನರಸಿಂಗಪುರ ದೇವಾಲಯಕ್ಕೆ ದೇವಾಲಯದ ಮಹಾದ್ವಾರಕ್ಕೆ ರಾಜಗೋಪುರವನ್ನು ನಿರ್ಮಿಸುವ ಕೆಲಸ.	2018-19	49.50	ಪುರಾತತ್ವ ಪರಂಪರೆ ಇಲಾಖೆ	–	19.50	–
44	ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಚಂದಗಾಲು ಗ್ರಾಮದಲ್ಲಿರುವ ಬಸವೇಶ್ವರ ದೇವಾಲಯದ ಉಳಿಕೆ ಕಾಮಗಾರಿ.	2018-19	20.00	ನಿರ್ಮಿತಿ ಕೇಂದ್ರ	–	10.00	–
45	ಕಸಬಾ ಹೋಬಳಿ, ಬೋರೆಕಲ್ಲಹಳ್ಳಿ ಗ್ರಾಮದಲ್ಲಿ ಯಾತ್ರಿನಿವಾಸ ಕಟ್ಟಡ ಕಾಮಗಾರಿ.	2018-19	25.00	ನಿರ್ಮಿತಿ ಕೇಂದ್ರ	–	15.00	–
46	ಕೆ.ಆರ್. ನಗರ ತಾಲ್ಲೂಕು ಹೆಬ್ಬಾಲು ಹೋಬಳಿ ಕಾಟ್ನಾಳು ಲಕ್ಷ್ಮೀ ದೇವಸ್ಥಾನ ಅಭಿವೃದ್ಧಿ.	2018-19	15.00	ಪುರಾತತ್ವ ಪರಂಪರೆ ಇಲಾಖೆ	–	15.00	–
47	ಕೆ.ಆರ್. ನಗರ ತಾಲ್ಲೂಕು ಮಿರ್ಲೆ ಗ್ರಾಮದ ಹುಣಸಮ್ಮ ದೇವಸ್ಥಾನಕ್ಕೆ ಮೂಲಭೂತ ಸೌಕರ್ಯ	2018-19	35.00	ನಿರ್ಮಿತಿ ಕೇಂದ್ರ	–	20.00	–
48	ಮೈಸೂರು ಜಿಲ್ಲೆ ಕೆ.ಆರ್. ನಗರ ತಾಲ್ಲೂಕು ಕೆ.ಆರ್. ನಗರದಲ್ಲಿರುವ ಶ್ರೀ ಅರ್ಕೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ.	2018-19	240.00	ಪುರಾತತ್ವ ಪರಂಪರೆ ಇಲಾಖೆ	–	50.00	–

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
49	ಮೈಸೂರು ಜಿಲ್ಲೆಯ ಸೋಮನಾಥಪುರದಲ್ಲಿರುವ ಶ್ರೀ ಪಂಚಲಿಂಗೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ	2018–19	375.00	ಪುರಾತತ್ವ ಪರಂಪರೆ ಇಲಾಖೆ	–	50.00	100.00
50	ಕೆ.ಆರ್.ನಗರ ತಾಲ್ಲೂಕು ಸಾಲಿಗ್ರಾಮದ ಭಾಸ್ಕರ ಸ್ವಾಮಿ ರಸ್ತೆ ಅಭಿವೃದ್ಧಿ	2019–20	100.00	ಕೆಆರ್ ಐಡಿಎಲ್	–	–	50.00
51	ಕೆ.ಆರ್.ನಗರ ತಾಲ್ಲೂಕು ಸಾಲಿಗ್ರಾಮದ ಶ್ರೀ ಆಂಜನೇಯಸ್ವಾಮಿ ದೇವಸ್ಥಾನ ರಸ್ತೆ ಅಭಿವೃದ್ಧಿ.	2019–20					
52	ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಶ್ರೀರಾಮದೇವರ ದೇವಸ್ಥಾನದ ಬಳಿ ಆಂಜನೇಯ ವಿಗ್ರಹ ಪ್ರತಿಷ್ಠಾಪನೆ.	2019–20	40.00	ಲೋಕೋಪಯೋಗಿ ಇಲಾಖೆ	–	–	13.00
53	ಕೆ.ಆರ್.ನಗರ ತಾಲ್ಲೂಕಿನಲ್ಲಿರುವ ಶ್ರೀ ಅರ್ಕೇಶ್ವರ ದೇವಸ್ಥಾನದ ಬಳಿ ಶಿವನ ವಿಗ್ರಹ ಪ್ರತಿಷ್ಠಾಪನೆ.	2019–20	40.00	ಲೋಕೋಪಯೋಗಿ ಇಲಾಖೆ	–	–	13.00
54	ಕೆ.ಆರ್.ನಗರ ತಾಲ್ಲೂಕು ಹೊಸ ಅಗ್ರಹಾರದ ಹೋಬಳಿ ದೊಡ್ಡವಡ್ಡರಗುಡಿ ಗ್ರಾಮದ ವೀರಭದ್ರೇಶ್ವರ ದೇವಸ್ಥಾನದ ಅಭಿವೃದ್ಧಿ ಕಾಮಗಾರಿ.	2019–20	15.00	ಲೋಕೋಪಯೋಗಿ ಇಲಾಖೆ	–	–	5.00
55	ಕೆ.ಆರ್.ನಗರ ತಾಲ್ಲುಕು ಚುಂಚನಕಟ್ಟೆ ಶ್ರೀ ರಾಮದೇವರ ದೇವಸ್ಥಾನದ ಆವರಣದಲ್ಲಿ ಹೆಚ್ಚುವರಿ ಚೈನ್‌ಲಿಂಕ್ ಫೆನ್ಸಿಂಗ್ ಹಾಗೂ ಕೂಡುರಸ್ತೆಗಳ ಅಭಿವೃದ್ಧಿ.	2019–20	40.00	ಕೆಆರ್ ಐಡಿಎಲ್	–	–	13.00
56	ಕೆ.ಆರ್. ನಗರ ಟೌನ್ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ. (ಮುಂದುವರೆದ ಕಾಮಗಾರಿ)	2019–20	35.00	ಲೋಕೋಪಯೋಗಿ ಇಲಾಖೆ	–	–	12.00
	ಕೆ.ಆರ್.ನಗರ ತಾಲ್ಲೂಕಿನ ಮೊತ್ತ		3417.50		0.00	863.50	751.25
	ಪಿರಿಯಾಪಟ್ಟಣ ತಾಲ್ಲೂಕು						
57	ಪಿರಿಯಾಪಟ್ಟಣ ತಾಲ್ಲೂಕಿನ ರಾವಂದೂರು ಮಠದ ಬಳಿ ಪ್ರವಾಸಿ ಮೂಲ ಸೌಕರ್ಯ ಅಭಿವೃದ್ಧಿ.	2018–19	25.00	ಕೆಆರ್ ಐಡಿಎಲ್	–	10.00	–
58	ಪಿರಿಯಾಪಟ್ಟಣ ತಾಲ್ಲೂಕಿನ ಚಿಟ್ಟನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಪ್ರವಾಸಿ ಸ್ಥಳದ ಮೂಲಭೂತ ಸೌಕರ್ಯ ನಿರ್ಮಾಣ.	2019–20	25.00	ಕೆಆರ್ ಐಡಿಎಲ್	–	–	8.00

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕಾಮಗಾರಿಯ ಹೆಸರು	ಮಂಜೂರಾದ ವರ್ಷ	ಅಂದಾಜು ಮೊತ್ತ	ಅನುಷ್ಠಾನ ಸಂಸ್ಥೆ	ಬಿಡುಗಡೆ ಮಾಡಿರುವ ಅನುದಾನ		
					2017-18	2018-19	2019-20
59	ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದ ಕನ್ನಡ ಮಠದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ. (ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ : :TOR/180/TDP/2019, ದಿನಾಂಕ: 28/11/2019)	2019-20	25.00	ಕೆಆರ್ ಐಡಿಎಲ್	–	–	10.00
60	ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟಕ್ಕೆ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ (ಕೆಟಿವಿಜಿ)	2019-20	200.00	ಕೆಆರ್ ಐಡಿಎಲ್	–	–	150.00
	ಪಿರಿಯಾಪಟ್ಟಣ ತಾಲ್ಲೂಕಿನ ಮೊತ್ತ		275.00		0.00	10.00	168.00
	ಸಾಲಿಗ್ರಾಮ ತಾಲ್ಲೂಕು						
61	ಸಾಲಿಗ್ರಾಮ ತಾಲ್ಲೂಕು ಮೇಲೂರು ಗ್ರಾಮದಲ್ಲಿ ಯಾತ್ರಿ ನಿವಾಸ ನಿರ್ಮಾಣ.	2019-20	100.00	ನಿರ್ಮಿತಿ ಕೇಂದ್ರ	–	–	33.00
62	ಸಾಲಿಗ್ರಾಮ ತಾಲ್ಲೂಕು ಬೈಲಾಪುರ ರಸ್ತೆ ಅಭಿವೃದ್ಧಿ ಕಾಮಗಾರಿ.	2019-20	15.00	ಲೋಕೋಪಯೋಗಿ ಇಲಾಖೆ	–	–	5.00
63	ಸಾಲಿಗ್ರಾಮ ತಾಲ್ಲೂಕು ಹೊಸ್ನೇನಹಳ್ಳಿ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ.	2019-20	15.00	ಲೋಕೋಪಯೋಗಿ ಇಲಾಖೆ	–	–	5.00
64	ಮೈಸೂರು ಜಿಲ್ಲೆಯ ಸಾಲಿಗ್ರಾಮ ತಾಲ್ಲೂಕು ಪುರತನ ದೊಡ್ಡ ಕೆರೆಯನ್ನಯ ಅಭಿವೃದ್ಧಿಪಡಿಸುವುದು (ಕೆಟಿವಿಜಿ)	2019-20	200.00	ಕೆಆರ್ ಐಡಿಎಲ್	–	–	150.00
65	ಸಾಲಿಗ್ರಾಮ ಹೋಬಳಿ ಯೋಗನರಸಿಂಹಸ್ವಾಮಿ ದೇವಸ್ಥಾನದ ಹತ್ತಿರ ಪಾತ್ ವೇ ಹಾಗೂ ಪಾರ್ಕಿಂಗ್ ವ್ಯವಸ್ಥೆ ಅಭಿವೃದ್ಧಿ ಕಾಮಗಾರಿ (ಕೆಟಿವಿಜಿ)	2019-20	199.00	ಕೆಆರ್ ಐಡಿಎಲ್	–	–	149.00
	ಸಾಲಿಗ್ರಾಮ ತಾಲ್ಲೂಕಿನ ಮೊತ್ತ		529.00				342.00
	ಮೈಸೂರು ಜಿಲ್ಲೆಯ ಒಟ್ಟು ಮೊತ್ತ		7122.50		690.00	1348.50	1738.25

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 972

ವಿಧಾನಸಭೆಯ ಸದಸ್ಯರ ಹೆಸರು : ಶ್ರೀ ಸುರೇಶ್. ಬಿ. ಎಸ್ (ಹೆಬ್ಬಾಳ)

ಉತ್ತರಿಸಬೇಕಾದ ದಿನಾಂಕ : 04-02-2021

ಉತ್ತರಿಸಬೇಕಾದವರು : ಮಾನ್ಯ ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವರು

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಪ್ಲಾಸ್ಟಿಕ್ ನಿಷೇಧ ಜಾರಿಯಲ್ಲಿದೆಯೇ; ಹಾಗಿದ್ದಲ್ಲಿ ಸದರಿ ನಿಷೇಧವನ್ನು ಎಂದಿನಿಂದ ಜಾರಿಗೆ ತರಲಾಗಿದೆ; ಈ ಸಂಬಂಧ ಪರಿಸರ ಮಾಲಿನ್ಯ ಮಂಡಳಿ ಹೊರಡಿಸಿರುವ ಮಾರ್ಗಸೂಚಿಗಳೇನು;	ರಾಜ್ಯದಲ್ಲಿ ಏಕಬಳಕೆಯ ಪ್ಲಾಸ್ಟಿಕ್ ನಿಷೇಧ ಜಾರಿಯಲ್ಲಿರುತ್ತದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012 ರನ್ವಯ ರಾಜ್ಯದಲ್ಲಿ ದಿನಾಂಕ 11-03-2016 ರಿಂದ ಪ್ಲಾಸ್ಟಿಕ್ ನಿಷೇಧ ಅಧಿಸೂಚನೆ ಜಾರಿಗೆ ಬಂದಿದ್ದು, ಇದರಡಿಯಲ್ಲಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ಬಳಕೆಯನ್ನು ರಾಜ್ಯದಾದ್ಯಂತ ನಿಷೇಧಿಸಲಾಗಿದೆ. ಮುಂದುವರೆದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012 ರನ್ವಯ ರಾಜ್ಯದಲ್ಲಿ ದಿನಾಂಕ 11-03-2016 ರ ಪ್ರಕಾರ ಮೇಲೆ ನಮೂದಿಸಿರುವ ಪ್ಲಾಸ್ಟಿಕ್‌ನಿಂದ ತಯಾರಾಗಿರುವ ವಸ್ತುಗಳನ್ನು ಉತ್ಪಾದನೆ, ವಿತರಣೆ ಮತ್ತು ಸರಬರಾಜನ್ನು ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಲಾಗಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಹೊರಡಿಸಿರುವ ಮಾರ್ಗಸೂಚಿಗಳು ಮತ್ತು ಕ್ರಮಗಳು; • ಪ್ಲಾಸ್ಟಿಕ್ ಉತ್ಪಾದಕರು ಹಾಗೂ ಪುನರ್ ಉತ್ಪಾದಕರ ಕಡ್ಡಾಯ ನೋಂದಣಿ. • ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯದಲ್ಲಿ ಸುಮಾರು 81 ಪ್ಲಾಸ್ಟಿಕ್ ಉತ್ಪಾದನಾ ಘಟಕಗಳಿಗೆ, 86 ಪ್ಲಾಸ್ಟಿಕ್

		ಪುನರ್ ಬಳಕೆ ಘಟಕಗಳಿಗೆ, ಅಧಿಕೃತ ಪರವಾನಿಗೆ ನೀಡಿದ್ದು, Extended Producer Responsibility ನಿಯಮದಡಿಯಲ್ಲಿ Multi layered plastic ಸಂಗ್ರಹಣೆ ಹಾಗೂ ಮರುಬಳಕೆಗೆ ಕ್ರಮ ವಹಿಸಲಾಗಿದೆ.
ಆ)	ಪ್ಲಾಸ್ಟಿಕ್ ನಿಷೇಧವನ್ನು ಕಡ್ಡಾಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ರಾಜ್ಯದಲ್ಲಿ Plastic Waste (Management and Handling) Rules, 2011 ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದನ್ನು ಖಾತ್ರಿಪಡಿಸುವ ನಿಟ್ಟಿನಲ್ಲಿ ರಾಜ್ಯ ಮಟ್ಟದಲ್ಲಿ 'State Level Advisory Committee' ನ್ನು, ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ರವರ ಅಧ್ಯಕ್ಷತೆಯಲ್ಲಿ ದಿನಾಂಕ 25-8-2011 ರಂದು ರಚಿಸಲಾಗಿರುತ್ತದೆ ಹಾಗು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪ್ಲಾಸ್ಟಿಕ್ ಸಲಹಾ ಸಮಿತಿಯನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳನ್ನು ಉತ್ಪಾದಿಸುವುದನ್ನು ಹಾಗೂ ಮಾರಾಟ ಮಾಡುವುದನ್ನು ನಿಯಂತ್ರಿಸಲು ತಹಸೀಲ್ದಾರ್ / ಉಪವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಟಾಸ್ಕ್‌ಫೋರ್ಸ್ ರಚಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಅಲ್ಲದೆ, ಪ್ಲಾಸ್ಟಿಕ್ ಕ್ಯಾರಿಬ್ಯಾಗ್‌ಗಳು ಸೇರಿದಂತೆ ಇತರೆ ನಿಷೇಧಿತ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ತಡೆಗಟ್ಟಲು ನಗರ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು (ಪೌರಾಯುಕ್ತರು/ಮುಖ್ಯಾಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು ಮುಂತಾದವರು) ತಪಾಸಣೆಯನ್ನು ಕೈಗೊಳ್ಳಲು ಸೂಚಿಸಿದೆ. ಈವರೆಗೂ ಬೃಹತ್ ಬೆಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 468 ಟನ್ ಪ್ಲಾಸ್ಟಿಕ್‌ನ್ನು ಮುಟ್ಟುಗೋಲು ಹಾಕಲಾಗಿರುತ್ತದೆ. ಇದಕ್ಕೆ ದಂಡವಾಗಿ ರೂ.4.17 ಕೋಟಿಗಳಷ್ಟು ದಂಡ ವಿಧಿಸಲಾಗಿರುತ್ತದೆ ಮತ್ತು ನಗರ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿ ಅಕ್ರಮ ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳ ದಾಸ್ತಾನು ಹಾಗೂ ಮಾರಾಟ ಮಳಿಗೆಗಳ ವಿರುದ್ಧ ದಾಳಿಗಳನ್ನು ನಡೆಸಿ, ಸುಮಾರು 2205 ಟನ್‌ಗಳಷ್ಟು ಅಕ್ರಮ ದಾಸ್ತಾನನ್ನು ವಶಪಡಿಸಿಕೊಳ್ಳಲಾಗಿದ್ದು, ರೂ.88.77 ಲಕ್ಷಗಳಷ್ಟು ದಂಡವನ್ನು ವಿಧಿಸಿ ವಸೂಲಿ ಮಾಡಲಾಗಿರುತ್ತದೆ.
ಇ)	ಪ್ಲಾಸ್ಟಿಕ್ ನಿಷೇಧದ ಆದೇಶವನ್ನು ಉಲ್ಲಂಘಿಸಿರುವವರ ವಿರುದ್ಧ ದಾಖಲಾಗಿರುವ ಪ್ರಕರಣಗಳು ಎಷ್ಟು	ಮೇಲ್ಕಂಡ ಆದೇಶದ ಉಲ್ಲಂಘನೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ 58 ಪ್ಲಾಸ್ಟಿಕ್ ಘಟಕಗಳಿಗೆ ಮುಚ್ಚುವ ಆದೇಶವನ್ನು ನೀಡಲಾಗಿದೆ.

<table>
<tr><td></td><td></td><td>ಅಲ್ಲದೆ, ನಗರ ಸ್ಥಳೀಯ ಸಂಸ್ಥೆಗಳಿಂದ ಪ್ಲಾಸ್ಟಿಕ್ ನಿಷೇಧದ ಉಲ್ಲಂಘಿತರ ವಿರುದ್ಧ 12 ಪ್ರಕರಣಗಳು ದಾಖಲಾಗಿರುತ್ತವೆ. ಜಿಲ್ಲಾವಾರು ವಿವರಗಳು ಕೆಳಕಂಡಂತಿರುತ್ತವೆ.
<table>
<tr><th>SI.no.</th><th>District Name</th><th>No.of Cases booked</th></tr>
<tr><td>1</td><td>Mysore</td><td>4</td></tr>
<tr><td>2</td><td>Uttara Kannada</td><td>6</td></tr>
<tr><td>3</td><td>Koppal</td><td>1</td></tr>
<tr><td>4</td><td>Ramanagar</td><td>1</td></tr>
<tr><td colspan="2">Total</td><td>12</td></tr>
</table>
</td></tr>
<tr><td>ಈ)</td><td>ಸದರಿ ಪ್ರಕರಣಗಳ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು? (ವರದಿ ನೀಡುವುದು)</td><td>ಅವುಗಳಲ್ಲಿ ನಿರಂತರ ಉಲ್ಲಂಘನೆಗಾಗಿ, 9 ಪ್ಲಾಸ್ಟಿಕ್ ಘಟಕಗಳ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಹೂಡಲಾಗಿರುತ್ತದೆ.</td></tr>
</table>

ಅಪಜೀ 18 ಇಎಸ್‌ವಿ 2021

(ಸಿ.ಪಿ.ಯೋಗೇಶ್ವರ)

ಪರಿಸರ ಮತ್ತು ಜೀವಿಶಾಸ್ತ್ರ ಹಾಗೂ ಪ್ರವಾಸೋದ್ಯಮ

ಸಚಿವರು

Karnataka Legislative Assembly

Starred Question No.	:	972
Name of the Member	:	Sri. Suresh. B. S (Hebbala)
Date to be answered on	:	04-02-2021
Minister to reply	:	Hon'ble Minister for Ecology & Environment and Tourism

Sl. No	Question	Reply
1)	Whether ban on use of plastic is in force in the state? If yes, since when; What are the guidelines issued by KSPCB?	Ban on use of single use plastic is in force in the State. The ban on use of plastic has come in force in the State vide Notification issued by Government of Karnataka No. FEE 17 EPC 2012, Bangalore dated: 11.03.2016. Under this notification usage and sale of plastic carry bag, plastic banner, plastic flags plastic plates, plastic cups, cling films, plastic sheet used for spreading on dining tables, thermocol and plastic manufactured out of plastic micro beads have been banned. Further, as per Notification No. FEE 17 EPC 2012, dated: 11.03.2016, storage, supply and distribution of aforementioned products manufactured from plastic are banned in the entire State. Guidelines issued by Karnataka State Pollution Control Board (KSPCB) and action taken include: • Compulsory registration of plastic manufacturers and recyclers. • KSPCB has registered 81 plastic manufacturing units and 86 plastic

		recyclers. As per the Extended Producers' Responsibility defined in the Rules for collection and reuse of multilayered plastic has been initiated.
2)	What are the action initiated by Government to implement plastic ban to make it mandatory,	In order to implement the Plastic Waste (Management and Handling) Rules, 2011 in an effective manner a State Level Advisory Committee has been constituted under the Chairmanship of the Principal Secretary to Government, Urban Development Department on 25.08.2011 and action has been taken to constitute District Plastic Advisory Committees under the chairmanship of respective District Commissioners. In order to implement the ban on manufacture /storage / sale of banned plastic items in jurisdiction of Urban local bodies (ULBs), Task Force Committee has been constituted under the Chairmanship of Tahsildar/ Assistant Commissioners. Further, officers of ULBs (Municipal / Chief Officer, Environmental Engineers, Health Inspector) have been directed to examine control over usage of banned plastic items. Till date, 468 Tons of Plastic were seized within the jurisdiction of Bruhat Bengaluru Mahanagara Palike (BBMP). Accordingly, a penalty of Rs.4.17 Crores has been imposed. Regular raids are conducted to seize illegal manufacture/ sales/ supply of banned plastic items in other Urban Local Bodies (ULBs), seizing approximate 2205 Tons of banned material and imposed fine of Rs.88.77 Lakhs.

<table>
<tr><td>3)</td><td>Action taken against violation of plastic ban notification and no. of cases filed against violations.</td><td>For the violating the above said notification Karnataka State Pollution Control Board has issued Closure Directions on 58 units engaged in manufacture of plastic banned items.

Further, 12 cases are registered by Urban Local Bodies at Districts level for violation. The details as follows:

<table>
<tr><th>Sl.no.</th><th>District Name</th><th>No. of Cases booked</th></tr>
<tr><td>1</td><td>Mysore</td><td>4</td></tr>
<tr><td>2</td><td>Uttara Kannada</td><td>6</td></tr>
<tr><td>3</td><td>Koppal</td><td>1</td></tr>
<tr><td>4</td><td>Ramanagar</td><td>1</td></tr>
<tr><td colspan="2">Total</td><td>12</td></tr>
</table>
</td></tr>
<tr><td>4)</td><td>Action taken by the Government against the above said cases.</td><td>For repeat violators, KSPCB has filed Criminal Case against 9 plastic units before jurisdictional courts.</td></tr>
</table>

No.FEE 18 ENV 2021

(C.P. Yogeshwara)
Minister for Minister for Ecology &
Environment and Tourism

ಪೂರಕ ಟಿಪ್ಪಣಿ

ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 2011 ನಿಯಮಗಳಲ್ಲಿ ಪ್ಲಾಸ್ಟಿಕ್ ಕೈಚೀಲಗಳು ಮತ್ತು ಹಲವು ಪದರಗಳ ಪ್ಲಾಸ್ಟಿಕ್ ಉತ್ಪಾದನೆ, ದಾಸ್ತಾನು, ಹಂಚಿಕೆ/ಮಾರಾಟ, ಪ್ಲಾಸ್ಟಿಕ್ ಬಳಕೆ, ಪ್ಲಾಸ್ಟಿಕ್ ತ್ಯಾಜ್ಯದ ಸಂಗ್ರಹಣೆ, ತ್ಯಾಜ್ಯದ ವಿಂಗಡಣೆ, ಮರು ಬಳಕೆ ಮತ್ತು ಸೂಕ್ತ ವಿಲೇವಾರಿ ಬಗ್ಗೆ ಸವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ.

- ಗುಟಕಾ, ತಂಬಾಕು ಮತ್ತು ಪಾನ್ ಮಸಾಲಾಗಳನ್ನು ಪ್ಲಾಸ್ಟಿಕ್ ಸ್ಯಾಚೆಟ್‌ಗಳಲ್ಲಿ ಶೇಖರಿಸುವುದು, ಕಟ್ಟಿ ಕೊಡುವುದು ಮತ್ತು ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ.
- ಪ್ಲಾಸ್ಟಿಕ್ ತ್ಯಾಜ್ಯದ ನಿರ್ವಹಣೆಗೆ ಪೌರಾಡಳಿತ ಸಂಸ್ಥೆಗಳಿಗೆ ಸವಿವರವಾದ ಮಾರ್ಗಸೂಚಿಗಳನ್ನು ನೀಡಲಾಗಿದೆ. ಇದರಲ್ಲಿ ಪ್ಲಾಸ್ಟಿಕ್ ತ್ಯಾಜ್ಯದ ಮರುಬಳಕೆಗೆ ಪ್ರೋತ್ಸಾಹವೂ ಸೇರಿದೆ
- 40 ಮೈಕ್ರಾನ್‌ಗಿಂತ ದಪ್ಪನಾದ ಕೈಚೀಲಗಳ ಮೇಲೆ ತಯಾರಕರ ಹೆಸರು, ನೋಂದಣಿ ಸಂಖ್ಯೆ ಮತ್ತು ಕೈ ಚೀಲದ ದಪ್ಪ ನಮೂದಾಗಿರುವುದನ್ನು ಕಡ್ಡಾಯಗೊಳಿಸಲಾಗಿದೆ.
- ಪ್ರತಿ ಪ್ಲಾಸ್ಟಿಕ್ ಕೈಚೀಲಗಳ ಉತ್ಪಾದಕರು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. ಈ ನೋಂದಣಿ ಅವಧಿ ಮೂರು ವರ್ಷದ್ದಾಗಿರುತ್ತದೆ.
- ಪ್ಲಾಸ್ಟಿಕ್ ಕೈಚೀಲಗಳನ್ನು ಚಿಲ್ಲರೆ ವ್ಯಾಪಾರಿಗಳು ಉಚಿತವಾಗಿ ವಿತರಿಸುವುದನ್ನು ನಿಷೇಧಿಸಲಾಗಿದೆ. ಸಂಬಂಧಪಟ್ಟ ಪೌರಾಡಳಿತ ಸಂಸ್ಥೆಗಳು ಅಧಿಸೂಚನೆಯ ಮೂಲಕ ವಿವಿಧ ಅಳತೆ ಮತ್ತು ದಪ್ಪದ ಪ್ಲಾಸ್ಟಿಕ್ ಕೈಚೀಲಗಳ ಬೆಲೆಯನ್ನು ನಿಗದಿಪಡಿಸುವುದು ಕಡ್ಡಾಯವಾಗಿದೆ.
- ಈ ನಿಯಮಾವಳಿಗಳಲ್ಲಿ ವಿದೇಶಕ್ಕೆ ರಫ್ತು ಮಾಡಲು ತಯಾರಾಗುವ ಯಾವುದೇ ಪ್ಲಾಸ್ಟಿಕ್‌ನ್ನು ನಿಷೇಧಿಸಿರುವುದಿಲ್ಲ.

ಕೇಂದ್ರ ಸರ್ಕಾರದ "ಪ್ಲಾಸ್ಟಿಕ್ ತ್ಯಾಜ್ಯ (ನಿರ್ವಹಣೆ ಮತ್ತು ನಿಭಾವಣೆ) ನಿಯಮಗಳು, 2011"ರ ಅಧಿಸೂಚನೆಯನುಸಾರ 40 ಮೈಕ್ರಾನ್‌ಗಿಂತ ಕಡಿಮೆ ಗಾತ್ರದ ಪ್ಲಾಸ್ಟಿಕ್ ಕೈಚೀಲಗಳ ಉತ್ಪಾದನೆ ಮತ್ತು ಬಳಕೆಯ ನಿಯಂತ್ರಣ ಮತ್ತು ತ್ಯಾಜ್ಯ ನಿರ್ವಹಣೆಗಾಗಿ ಅಗತ್ಯವಾದ ಕ್ರಮಗಳನ್ನು ರಾಜ್ಯಾದ್ಯಂತ ಕೈಗೊಳ್ಳಲಾಗುತ್ತಿದೆ.

ಕರ್ನಾಟಕ ರಾಜ್ಯ ಪತ್ರ ಅಧಿಸೂಚನೆ ಸಂಖ್ಯೆ: ಅಪಜೀ 17 ಇಪಿಸಿ 2012, ಬೆಂಗಳೂರು, ದಿನಾಂಕ: 11.03.2016 ರ ಪ್ರಕಾರ "ಯಾವುದೇ ವ್ಯಕ್ತಿ, ಅಂಗಡಿ ಮಾಲೀಕ, ಮಾರಾಟಗಾರ, ಸಗಟು ಮಾರಾಟಗಾರ ಅಥವಾ ಚಿಲ್ಲರೆ ವ್ಯಾಪಾರಿ, ವ್ಯಾಪಾರಿ ಮತ್ತು ಮಾರಾಟಗಾರರು, ಯಾವುದೇ ದಪ್ಪದ ಯಾವುದೇ ರೀತಿಯ ಪ್ಲಾಸ್ಟಿಕ್ ಕ್ಯಾರಿಬ್ಯಾಗ್, ಪ್ಲಾಸ್ಟಿಕ್ ಭಿತ್ತಿಪತ್ರ, ಪ್ಲಾಸ್ಟಿಕ್ ತೋರಣ, ಫ್ಲೆಕ್ಸ್, ಪ್ಲಾಸ್ಟಿಕ್ ಬಾವುಟ, ಪ್ಲಾಸ್ಟಿಕ್ ತಟ್ಟೆ, ~~ಪ್ಲಾಸ್ಟಿಕ್ ಲೋಟ, ಪ್ಲಾಸ್ಟಿಕ್ ಚಮಚ, ಕ್ಲಿಂಗ್ ಫಿಲ್ಮ್ ಮತ್ತು ಊಟದ ಮೇಜಿನ ಮೇಲೆ ಹರಡುವ ಪ್ಲಾಸ್ಟಿಕ್~~ ಹಾಳೆ ಹಾಗೂ ಥರ್ಮೋಕೋಲ್ ಮತ್ತು ಪ್ಲಾಸ್ಟಿಕ್ ಮೈಕ್ರೋ ಬೀಡ್ಸ್‌ನಿಂದ ತಯಾರಾದಂತಹ ಮೇಲ್ಕಂಡ ವಸ್ತುಗಳ ಬಳಕೆ, ತಯಾರಿಕೆ, ಸರಬರಾಜು, ಸಂಗ್ರಹಣೆ, ಸಾಗಾಣಿಕೆ, ಮಾರಾಟ ಮತ್ತು ವಿತರಣೆ ಮಾಡುವುದನ್ನು ರಾಜ್ಯಾದ್ಯಂತ ನಿಷೇಧಿಸಲಾಗಿದೆ.

****

ಕರ್ನಾಟಕ ವಿಧಾನಸಭೆ

(15ನೇ ವಿಧಾನಸಭೆ, 9ನೇ ಅಧಿವೇಶನ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	806
ಸದಸ್ಯರ ಹೆಸರು	:	ಶ್ರೀ ಬಾಲಕೃಷ್ಣ ಸಿ.ಎನ್ (ಶ್ರವಣಬೆಳಗೊಳ)
ಉತ್ತರಿಸ ಬೇಕಾದ ದಿನಾಂಕ	:	04-02-2021
ಉತ್ತರಿಸುವವರು	:	ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಗ್ರಾಮೀಣ ಪ್ರದೇಶಗಳಲ್ಲಿ ಚಿರತೆಗಳ ಹಾವಳಿ ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ)	ಬಂದಿದ್ದಲ್ಲಿ, ಚಿರತೆಗಳ ಹಾವಳಿಯನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ರಾಜ್ಯದಲ್ಲಿ ಚಿರತೆ ಹಾವಳಿ ತಡೆಗಟ್ಟಲು ವಿಭಾಗಾಧಿಕಾರಿಗಳು ಮುಂಜಾಗ್ರತಾ ಕ್ರಮವಾಗಿ ತಮ್ಮ ತಮ್ಮ ವಿಭಾಗಗಳಲ್ಲಿ 3-4 ಜನರನ್ನೊಳಗೊಂಡ ರಕ್ಷಣಾ ಪಡೆಯನ್ನು ರಚಿಸಿ ಹಾವಳಿ ಪ್ರದೇಶಗಳನ್ನು ಗುರುತಿಸಿ ಜನಸಂಪರ್ಕ ಸಭೆ ನಡೆಸಲು ಹಾಗೂ ಮುಂಜಾಗ್ರತಾ ಕ್ರಮವಾಗಿ ಹಾವಳಿ ಇರುವ ಕಡೆ ರಾತ್ರಿ ಗಸ್ತು ಮಾಡಲು ಮತ್ತು ಚಿರತೆ ಹಿಡಿಯಲು ಬೇಕಾದ ಬೋನು ಹಾಗೂ ಮತ್ತಿತರೆ ಉಪಕರಣಗಳನ್ನು ಸಿದ್ಧತೆ ಮಾಡಿಕೊಂಡು ಪ್ರತಿ ವಾರ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ವಲಯ ಅರಣ್ಯಾಧಿಕಾರಿಗಳೊಂದಿಗೆ ಭೇಟಿ ನೀಡಿ ಸಾರ್ವಜನಿಕರಿಗೆ ತಿಳುವಳಿಕೆ ನೀಡುವುದಲ್ಲದೇ, ಅದರಲ್ಲೂ ಕಾಡಂಚಿನಲ್ಲಿ ವಾಸಿಸುವ ಜನರಿಗೆ ಹೆಚ್ಚಿನ ತಿಳುವಳಿಕೆ ನೀಡಲಾಗುತ್ತಿದೆ.
ಇ)	ಚಿರತೆ ದಾಳಿಯಿಂದ ಹಸು ಮತ್ತು ಕುರಿಗಳು ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಈ)	ಬಂದಿದ್ದಲ್ಲಿ, ಚಿರತೆ ದಾಳಿಗೆ ಬಲಿಯಾದ ಜಾನುವಾರುಗಳ ಮಾಲೀಕರಿಗೆ ಸರ್ಕಾರ ಪರಿಹಾರಧನವನ್ನೇನಾದರೂ ನೀಡುತ್ತಿದೆಯೇ;	ಹೌದು
ಉ)	ಹಾಗಿದ್ದಲ್ಲಿ, ಪ್ರತಿ ಜಾನುವಾರಿಗೆ ಸರ್ಕಾರ ನೀಡುತ್ತಿರುವ ಪರಿಹಾರದ ಮೊತ್ತವೆಷ್ಟು;	ವನ್ಯಪ್ರಾಣಿಗಳ ದಾಳಿಯಿಂದ ಉಂಟಾಗುವ ಸಾಕುಪ್ರಾಣಿ ಹತ್ಯೆ ಪ್ರಕರಣಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ:ಅಪಜೀ 109 ಎಫ್‌ಎಪಿ 2014, ದಿನಾಂಕ:13-08-2014ರನ್ವಯ ಹಸು, ಎತ್ತು, ಎಮ್ಮೆ ಮತ್ತು ಕೋಣ ಮೃತಪಟ್ಟಲ್ಲಿ ರೂ.10,000/- ಹಾಗೂ ಕುರಿ, ಮೇಕೆ ಮೃತಪಟ್ಟಲ್ಲಿ ರೂ.5,000/-ಗಳ ದಯಾತ್ಮಕಧನವನ್ನು ಪಾವತಿಸಲಾಗುತ್ತಿದೆ.

ಊ) ಶ್ರವಣಬೆಳಗೊಳ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಚಿರತೆಯ ದಾಳಿಯಿಂದ ಹತ್ಯೆಯಾದ ಜಾನುವಾರುಗಳ ಸಂಖ್ಯೆ ಎಷ್ಟು; ಅವುಗಳಿಗೆ ನೀಡಿರುವ ಪರಿಹಾರದ ಮೊತ್ತವೆಷ್ಟು? (ಕಳೆದ ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು).

ಶ್ರವಣಬೆಳಗೊಳ ವಿಧಾನ ಸಭಾಕ್ಷೇತ್ರದ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಚಿರತೆಯ ದಾಳಿಯಿಂದ ಉಂಟಾದ ಸಾಕುಪ್ರಾಣಿ ಹತ್ಯೆ ಹಾಗೂ ನೀಡಿರುವ ಪರಿಹಾರದ ಮೊತ್ತದ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ವರ್ಷ	ಸಾಕುಪ್ರಾಣಿ ಹತ್ಯೆ	
		ಪ್ರಕರಣ	ಮೊತ್ತ (ರೂ.ಲಕ್ಷಗಳಲ್ಲಿ)
1	2018–19	21	1,94,000
2	2019–20	87	7,22,500
3	2020–21	36	2,13,000
	ಒಟ್ಟು	**144**	**11,29,500**

ಸಂಖ್ಯೆ: ಅಪಜೀ 27 ಎಫ್‌ಡಬ್ಲ್ಯೂಎಲ್ 2021

(ಅರವಿಂದ ಲಿಂಬಾವಳಿ)
ಅರಣ್ಯ, ಕನ್ನಡ ಮತ್ತು ಸಂಸ್ಕೃತಿ ಸಚಿವರು

9

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 935
ಮಾನ್ಯ ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)
ಉತ್ತರಿಸಬೇಕಾದ ದಿನಾಂಕ : 04-02-2021
ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ	ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕಿಗೆ ತಾಯಿ ಮತ್ತು ಮಕ್ಕಳ (ಎಂ.ಸಿ.ಹೆಚ್) ಆಸ್ಪತ್ರೆಯು ಅವಶ್ಯಕವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಆ	ಬಂದಿದ್ದಲ್ಲಿ, ಈ ಆಸ್ಪತ್ರೆಯನ್ನು ಪ್ರಾರಂಭಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ಹಾಗಿದ್ದಲ್ಲಿ, ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿರುತ್ತದೆ; (ವಿವರ ನೀಡುವುದು)	ಬೈಲಹೊಂಗಲದಲ್ಲಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಪ್ರಾರಂಭಿಸಲು 2021-22ನೇ ಸಾಲಿನ ಎನ್.ಹೆಚ್.ಎಂ ಕ್ರಿಯಾ ಯೋಜನೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.
ಇ	ಸದರಿ ಆಸ್ಪತ್ರೆಯನ್ನು ಯಾವ ಕಾಲಮಿತಿಯಲ್ಲಿ ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದು?	2021-22ನೇ ಸಾಲಿನ ಎನ್.ಹೆಚ್.ಎಂ ಕ್ರಿಯಾ ಯೋಜನೆಯಲ್ಲಿ ಸದರಿ ಕಾಮಗಾರಿಗೆ ಅನುಮೋದನೆ ದೊರೆತಲ್ಲಿ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮವಹಿಸಲಾಗುವುದು.

ಆಕುಕ 08 ಎಸ್‌ಬಿವಿ 2021

(ಡಾ॥ ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

10

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 878

ಸದಸ್ಯರ ಹೆಸರು : ಶ್ರೀ ಹೂಲಗೇರಿ .ಡಿ .ಎಸ್. (ಲಿಂಗಸುಗೂರು)

ಉತ್ತರಿಸುವ ದಿನಾಂಕ : 04.02.2020

ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
